# ನಾದನೂಪುರ ವಂಡಾರು
# Nadanoopura Vandaru



ಪತ್ತನಾಜೆ ಆಟದ ನೋಟ


ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/



ಪರಿವಿಡಿ
ಬೋರ್ಡ್ ರೂಮ್
ಸಂಪಾದಕೀಯ
ಕಲಾವಿದರ ಸಂಘಟನೆಗೊಬ್ಬ ನಾಯಕ ಪಟ್ಟ
ಮೇಳ ದರ್ಪಣ ಸಂಚಿಕೆ 2–ಕುಂಡಾವು ಮೇಳ
ಬಡಗಿನ ಸ್ತ್ರೀ ವೇಷಧಾರಿ–ಕುಂಜಾಲು ವಿಷ್ಣುಮೂರ್ತಿ ಬಾಸ್ತ್ರಿ
ಧೀರ ಕಲೆಯೊಳಗೆ ಕೀರವಾಣಿಯರು– ಅನಸೂಯ ಈಶ್ವರಚಂದ್ರ ರಾವ್
ಕಾಲಮಿತಿ ವ್ಯವಸ್ಥೆಯಲ್ಲಿ ಕಟೀಲು ಮೇಳದ ಪ್ರದರ್ಶನ
ಯಕ್ಷಗಾನದೊಳಗಣ ಜೈನ ಸಾಹಿತ್ಯ
ನಾದನೂಪುರ ಟ್ರಸ್ಟ್ ಆಯೋಜನೆಯ ಕಾರ್ಯಕ್ರಮಗಳ ವಿವರ


## ತಿಂಗಳ ಹೈಲೈಟ್ಸ್

ಸಂಘಟನೆಯ ನೂರೆಂಟು ಬವಣೆ – ಲಾಭ ಆಶಾ ಗೋಪುರ
ಕಲಾವಿದರ ಸಂಘಟನೆಗೊಬ್ಬ ನಾಯಕ ಪಟ್ಟ – ಪಟ್ಟೋತ್ಸವಕ್ಕೆ ನೆರೆದ ಜನಸಾಗರ
ಕ್ರಾಂತಿಯ ಸರದಾರ – ಕುಂಡಾವು ಮೇಳದ ಗುರಿಕಾರ – ಮೇಳ ದರ್ಪಣ ಸಂಚಿಕೆ 2
ಬಡಗಿನ ಮೋಹಕ ಸ್ತ್ರೀ ವೇಷಧಾರಿ – ಕುಂಜಾಲು ವಿಷ್ಣುಮೂರ್ತಿ ಬಾಸ್ತ್ರಿ
ಅಪರೂಪದ ಯಕ್ಷಗಾನ ವಿದೂಷಕಿ – ಹಾಸ್ಯದಲ್ಲೂ ಮಹಿಳೆಯ ಛಾಪು
ಯಕ್ಷಗಾನದೊಳಗಣ ಜೈನ ಸಾಹಿತ್ಯ

### ಬೋರ್ಡ್ ರೂಂ

ಒಂದು ಕಾರ್ಯಕ್ರಮದ ಸಂಘಟನೆ ಅಥವಾ ಸಂಯೋಜನೆ ಹೂವೆತ್ತಿದಷ್ಟು ಸುಲಭ ಅಲ್ಲವೇ ಅಲ್ಲ. ಇಲ್ಲಿ ಸಾಕಷ್ಟು ಸಂವಹನ, ಪೂರ್ವ ಯೋಜನೆಗಳು, ಪ್ರಚಾರ ಕಾರ್ಯ ಹೊಂದಾಣಿಕೆ, ಜೊತೆಗೆ ಹೆಚ್ಚಿನ ಶ್ರಮ ಬೇಡುವ ಕಾರ್ಯವಿದು. ಇವೆಲ್ಲವನ್ನೂ ಸಮರ್ಥವಾಗಿ ನಿರ್ವಹಿಸದರಷ್ಟೇ ಯಶಸ್ಸಿನ ಮಂದಹಾಸ ಮೂಡಲು ಸಾಧ್ಯ. ಯಕ್ಷಗಾನ ಸಂಘಟನೆಯ ವಿಚಾರವಾಗಿ ಹೇಳುವುದಾದರೆ, ಮೊದಲಿನಿಂದಲೂ ಈ ಕ್ಷೇತ್ರದ ಜನ, ಕಲಾವಿದರು, ಪ್ರೇಕ್ಷಕರು ಅಭಿಮಾನಗಳ ಒಡನಾಟ, ಪರಿಚಯವಿದ್ದವರು, ಹತ್ತಿರದಿಂದ ಬಲ್ಲವರು ಯಶಸ್ವಿಯಾಗಿ ಒಂದು ಕಾರ್ಯಕ್ರಮ ಸಂಘಟಿಸಲು ಸಾಧ್ಯವಾಗುತ್ತಿತ್ತು. ಅಲ್ಲದೆ, ಕಲಾವಿದರಾಗಿಯೂ ಯಶಸ್ವಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾದ ಯೋಜನೆಯೊಂದಿಗೆ ಸಂಯೋಜಿಸಿ ಸಂಘಟಿಸಿದವರು ಬಹಳಷ್ಟು ಜನರಿದ್ದಾರೆ. ಆದರೆ ಇತ್ತೀಚಿನ ದಿನಗಳನ್ನು ಒಂದು ಕಾರ್ಯಕ್ರಮ ಸಂಘಟಿಸುವುದು ಅಷ್ಟೊಂದು ಸುಲಭ ಅಲ್ಲವೇ ಅಲ್ಲ. ಎಷ್ಟೇ ಶ್ರಮ ಹಾಕಿದರೂ ಸಂಘಟಿಸುವುದಕ್ಕೆ ಹೂಡಿದ ವೆಚ್ಚ ಹಿಂದೆ ಬರುತ್ತದೆ ಎಂಬ ನಿರೀಕ್ಷೆ ಈಗಿನ ದಿನಗಳಲ್ಲಿ ಸಾಧ್ಯವಿಲ್ಲ. ಏಕೆಂದರೆ ಕಳೆದ ವರ್ಷದ ತಿರುಗಾಟವನ್ನು ಅವಲೋಕನ ಮಾಡಿದರೆ ಟೆಂಟ್ ಮೇಳದ ಹಲವಾರು ಪ್ರದರ್ಶನಗಳು ನಿರಾಸಾದಾಯಕ ವಾತಾವರಣವನ್ನು ನಿರ್ಮಿಸಿದೆ. ಹಲವಾರು ಪ್ರದರ್ಶನಗಳಲ್ಲಿ ಖಾಲಿ ಆಸನಗಳನ್ನೇ ಕಲಾವಿದರು ನೋಡುವಂತಾಯಿತು. ಇದು ಪ್ರೇಕ್ಷಕರಿಲ್ಲದೆ, ಯಕ್ಷಗಾನ ಮುಂದೆ ಹೇಗೆ ಎನ್ನುವ ಪ್ರಶ್ನೆಯನ್ನಂತೂ ಹುಟ್ಟು ಹಾಕಿದೆ. ಇಂತಹಾ ಪರಿಸ್ಥಿತಿಯಲ್ಲಿ ಒಬ್ಬ ಸಂಘಟಕ ಒಂದು ಕಾರ್ಯಕ್ರಮ ಆಯೋಜನೆ ಮಾಡಬೇಕೆಂದರೆ ನೂರು ಬಾರಿ ಯೋಚನೆ ಮಾಡಿಕೊಳ್ಳಬೇಕಾಗುತ್ತದೆ. ಲಾಭದ ಪ್ರಶ್ನೆ ಪಕ್ಕಕ್ಕಿರಲಿ, ಹಾಕಿದ ಹಣವಾದರೂ ವಾಪಾಸು ಬರುವ ಧೈರ್ಯವಿಲ್ಲ. ಆಟ ಆಡಿಸುವ ಸಂಘಟರು, ಕಾಂಟ್ರಾಕ್ಟುದಾರರು ಮೊದಲಿನ ಉತ್ಸಾಹ ತೋರುತ್ತಿಲ್ಲ. ಮೇಳದ ಪ್ರಸಂಗಗಳನ್ನೇ ಪ್ರದರ್ಶನಕ್ಕೆ ಕೇಳಿಕೊಂಡು ಬರುವವರು ಕಡಿಮೆಯಾಗುತ್ತಿದ್ದಾರೆ. ಎಲ್ಲಾ ಶ್ರಮ ಹಾಕಿಯೂ ಪ್ರೇಕ್ಷಕರನ್ನು ಒತ್ತಾಯದಿಂದ ಕೂರಿಸುವಂತಹಾ ಪರಿಸ್ಥಿತಿ ಇದೆ. ಆದರೂ ಬೆರಳೆಣಿಕೆಯ ಪ್ರದರ್ಶನಗಳು ಲಾಭ ಕಂಡಿವೆ. ಇಲ್ಲವೆಂದಲ್ಲ. ಆದರೆ ವಿಶೇಷ ಆಕರ್ಷಣೆ, ಇನ್ನಿಲ್ಲದ ಕಸರತ್ತು, ಜೊತೆಗೆ ಹಣ ಹೋದರೂ ಪರವಾಗಿಲ್ಲ. "ಅದ್ದೂರಿ"ಗಳನ್ನು ಪ್ರಸಂಗಕ್ಕೆ ತುಂಬಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವ, ಹೆಚ್ಚಿನ ಶ್ರಮ ಇದ್ದರಷ್ಟೆ ಲಾಭ ಬಂದರೆ ಬರಬಹುದು. ಬಂದೇ ಬರುತ್ತದೆ ಎಂದಲ್ಲ. ಮೊದಲೆಲ್ಲಾ ಕಲಾವಿದ ತನ್ನ ಆರ್ಥಿಕ ಅನೂಕೂಲಕ್ಕಾಗಿ ಸಂಘಟನೆ ಮಾಡಿ ಸಂಪಾದನೆ ಮಾಡಿದ್ದೂ ಇದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಕಲಾವಿದನೊಬ್ಬ ಪ್ರಸಂಗ ಮಾಡಿಸುವ ವಿಚಾರಕ್ಕೆ ಕೈ ಹಾಕುವುದು ಕಷ್ಟವೇ. ಇಂಥದ್ದರಲ್ಲಿ ನಮ್ಮ ನಾ.ನೂ.ಯ. ಟ್ರಸ್ಟ್ ಒಂದು ಸುಂದರವಾದ ಸಾಂಪ್ರದಾಯಿಕ ಯಕ್ಷಗಾನ ಕಾರ್ಯಕ್ರಮವನ್ನು ಆಯೋಜಿಸಿದೆ. ಜೂನ್ 10ನೇ ತಾರೀಕು ಬ್ರಹ್ಮಾವರದ ಬಂಟರ ಭವನದಲ್ಲಿ ಸಂಜೆ 7 ಗಂಟೆಯಿಂದ ದಾನ ಚಿಂತಾಮಣಿ ಎನ್ನವಂತಹಾ ಆಖ್ಯಾನದ ಪ್ರದರ್ಶನಕ್ಕೆ ನಾವು ಆಯ್ಕೆ ಮಾಡಿಕೊಂಡ ಕಲಾವಿದರ ತಂಡ ಸಜ್ಜಾಗುತ್ತಿದೆ. ಈ ಪ್ರದರ್ಶನ ಲಾಭ ಮಾಡುವ ಉದ್ದೇಶದಿಂದಲ್ಲ. ಕಲೆಯ ಮೇಲಿನ ಪ್ರೇಮದಿಂದ. ಅಪ್ಪಟ ಕಲಾಪ್ರೇಮ ಜೀವಂತವಾಗಿರಲು ಕಲಾಪ್ರೇಮಿಗಳ ಪೋಷಣೆ, ಅಕ್ಕರೆಯ ಹಾರೈಕೆ, ಬೆಂಬಲ ತೀರಾ ಅಗತ್ಯ.. ನೀವು ಬಂದರೆ ಬಹಳಷ್ಟು ಚೆಂದ.. ಇದು ನಿಮಗಾಗಿಯೇ ಆಯೋಜಿಸಿರುವ ಕಾರ್ಯಕ್ರಮ. ಯಕ್ಷಗಾನ ಕಾರ್ಯಕ್ರಮದ ಸಂಘಟನೆ ಸವಾಲಾಗಿರುವ ಈ ಹೊತ್ತಲ್ಲಿ, ನಮ್ಮ ಈ ಪ್ರಯತ್ನವನ್ನು ಯಕ್ಷಗಾನದ ಪ್ರೇಮಿಗಳೇ ಗೆಲ್ಲಿಸಿಕೊಡುತ್ತಾರೆಂಬ ನಿರೀಕ್ಷೆ ನಮ್ಮದು.. ಕಲಾಕಾಣಿಕೆಯಾಗಿ 200 ರೂಗಳನ್ನಷ್ಟೇ ಪ್ರೇಕ್ಷಕರಿಂದ ಸ್ವೀಕರಿಸುತ್ತಿದ್ದೇವೆ.



ಇದರೊಂದಿಗೆ ನಾ.ನೂ.ಯ. ಟ್ರಸ್ಟ್ ತುಳು ಪ್ರಸಂಗವೊಂದರ ಬಿಡುಗಡೆಗೂ ಮುಂದಾಗಿದೆ. ಶುಭಾಶಯ ಜೈನ್ ವಿರಚಿತ ಅಪ್ಪೆ ಅಂಜನೆ ಎಂಬ ಪೌರಾಣಿಕ ತುಳು ಯಕ್ಷಗಾನ ಪ್ರಸಂಗದ ಬಿಡುಗಡೆ ಹಾಗೂ ಪ್ರದರ್ಶನ ಮಂಗಳೂರು ವಿಶ್ವವಿದ್ಯಾನಿಯದಲ್ಲಿ ಜೂನ್ ಒಂದನೇ ತಾರೀಕು ಗುರುವಾರದಂದು ಸಂಜೆ 4 ಗಂಟೆಗೆ ನಡೆಯಲಿದೆ. ಮಂಗಳೂರು ವಿ.ವಿ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಶ್ರೀ ಸಂಸ್ಥಾನ ಒಡಿಯೂರು ತುಳು ಅಧ್ಯಯನ ಕೇಂದ್ರ, ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಸಹಯೋಗದಲ್ಲಿ ಈ ಕೃತಿ ಬಿಡುಗಡೆಯಾಗಲಿದ್ದು ತೆಂಕಿನ ಮೇಳವಾದ ಬೆಂಕಿನಾಥೇಶ್ವರ ಮೇಳದವರು ಪ್ರಥಮ ಪ್ರಯೋಗ ನಡೆಸಿಕೊಡಲಿದ್ದಾರೆ. ಇದರ ಹೆಚ್ಚಿನ ಮಾಹಿತಿಗಳು ಮುಂದಿನ ಲೇಖನದಲ್ಲಿದೆ. ನಮ್ಮೆಲ್ಲ ಕಾರ್ಯಕ್ರಮಗಳಿಗೆ ನಿಮ್ಮ ಪ್ರೋತ್ಸಾಹ ಆಶೀರ್ವಾದಗಳಿರಲಿ. ವಂದನೆಗಳು – ***ವಂಡಾರು ಗೋವಿಂದ***

**ಸಂಪಾದಕೀಯ**

***ಆತ್ಮೀಯ ಓದುಗರೆ,***

ಪ್ರತಿಯೊಂದು ಉದ್ಯೋಗದಲ್ಲೂ ಒಬ್ಬ ವ್ಯಕ್ತಿಯ ಅರ್ಹತೆ, ಪ್ರತಿಭಾ ಸಂಪನ್ನತೆ, ಕೌಶಲ್ಯ, ಬೆಳವಣಿಗೆ, ಆ ಸಂಸ್ಥೆಗೆ ಆತನ ಕೊಡುಗೆಯನ್ನು ಮೌಲ್ಯಮಾಪನ ಮಾಡುವ ಕ್ರಮವಿದೆ. ಅದರ ಆಧಾರದ ಮೇಲೆ ಒಬ್ಬ ಉದ್ಯೋಗಿಗೆ ಭತ್ಯೆಗಳು ಹೆಚ್ಚಾಗುವುದು, ಭಡ್ತಿ ದೊರಕುವುದು ನಡೆಯುತ್ತದೆ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ನಡೆಯೋ ಮೌಲ್ಯಮಾಪನ ಪ್ರಕ್ರಿಯೆ. ವ್ಯಕ್ತಿಯ ವ್ಯಕ್ತಿಗತ ಬೆಳವಣಿಗೆ ಹಾಗೂ ಸಾಂಸ್ಥಿಕ ಬೆಳವಣಿಗೆಗೆ ಇದು ಪೂರಕ ಹಾಗೂ ಅಗತ್ಯ. ಆದ್ರೆ ಸಿನಿಮಾ, ಧಾರಾವಾಹಿ, ನಾಟಕ, ಯಕ್ಷಗಾನ, ಕಲೆಯ ವಿಚಾರಕ್ಕೆ ಬಂದಾಗ ಇಂತಹ ಮೌಲ್ಯಮಾಪನ/ ವಿಮರ್ಶೆಗಳು ನಡೆಯುವ ವಿಧಾನವೇ ಬೇರೆ ಅಲ್ಲದೆ ವಿಮರ್ಶೆಗಳು ಅಲ್ಲಿ ವಿಮರ್ಶೆಗಳು ನಡೆಯುವುದು ತೀರಾ ಕಡಿಮೆ. ಒಬ್ಬ ನಟನ ಅಥವ ಒಂದು ಸಿನಿಮಾದ ಪ್ರಚಾರವೇ ಅದರ/ಅವನ ಮೌಲ್ಯ ಮಾಪನ ಎನ್ನಬಹುದು. ಸಿನಿಮಾ ನಾಟಕದಲ್ಲಿ ಉತ್ತಮವಾದ ಕಥೆಗಳು ಹೆಚ್ಚು ಪ್ರದರ್ಶನ ಕಾಣುತ್ತವೆ. ಪ್ರತಿಭಾವಂತ ನಟ ಬೇಗ ಜನಪ್ರಿಯತೆ ಪಡೆದುಕೊಳ್ಳುತ್ತಾನೆ. ಇದು ಗೋಚರವಾಗುವಂತಹ ಮೌಲ್ಯಮಾಪನ ಎಂದೆನಿಸಿದರೂ ಸಮಗ್ರವಾದ ಮೌಲ್ಯಮಾಪನ ಅಂತಂದ್ರೆ ತಪ್ಪಾಗುತ್ತೆ. ಉದಾಹರಣೆಗೆ ಒಬ್ಬ ನಟನ ಒಂದು ಭಾವನೆಯ ಪಾತ್ರಗಳು ಬಹಳ ಚೆನ್ನಾಗಿರಬಹುದು, ಮತ್ತೊಂದು ರೀತಿಯ ಪಾತ್ರಗಳಲ್ಲಿ ಪಕ್ವತೆ ಕಡಿಮೆ ಇರಬಹುದು. ಆದರೆ ಅಭಿಮಾನಿಗಳು ಆತನ ಒಳ್ಳೆಯ ಅಂಶಗಳನ್ನು ಮಾತ್ರ ಎತ್ತಿ ಹಿಡಿದು ಸುಧಾರಿಸಬಹುದಾದ ಅಂಶಗಳನ್ನು ಹೇಳ ಹೋಗುವುದಿಲ್ಲ. ಅದೇ ರೀತಿ ನಿನಿಮಾ ಧಾರಾವಾಹಿ ಯಕ್ಷಗಾನದಲ್ಲೂ ಅಷ್ಟೆ. ಪ್ರಸಂಗವೊಂದರ ಕೆಲವು ಉತ್ತಮ ವಿಚಾರಗಳನ್ನೇ ಇಟ್ಟುಕೊಂಡು ಪರಿಪೂರ್ಣ ಎಂಬಂತೆ ಬಿಂಬಿಸೋ ಯತ್ನ ನಡೆಯುತ್ತೆ. ಒಂದು ಸಿನಿಮಾ, ನಾಟಕ, ಯಕ್ಷಗಾನವೇ ಇರಲಿ, ಸಮಗ್ರವಾದ ವಿಮರ್ಶೆ ಅನ್ನೋದು ಪ್ರದರ್ಶನದ ಮೌಲ್ಯವನ್ನು ಹೆಚ್ಚಿಸುವಂತಹ ಕೆಲಸ ಮಾಡುತ್ತೆ. ದೃಶ್ಯ ಮಾಧ್ಯಮಗಳಲ್ಲಿ ನಾನು ಆಗಲೇ ಹೇಳಿದಂತೆ ವಿಮರ್ಶೆಗಳು ಪ್ರತ್ಯಕ್ಷ ರೂಪದಲ್ಲಿರೋದ್ರಿಂದ ಅಂದರೆ ಅದು ಸಾರ್ವತ್ರಿಕವಾಗಿ ಗೋಚರವಾಗೋದ್ರಿಂದ ಒಬ್ಬ ನಟ, ಸಿನಿಮಾ ಅಥವ ಒಂದು ಪ್ರದರ್ಶನದ ಮೇಲೆ ನೇರವಾಗಿ ಪರಿಣಾಮ ಬೀರೋ ಸಾಧ್ಯತೆಗಳು ಹೆಚ್ಚು. ಇತರ ಉದ್ಯೋಗಗಳಲ್ಲಿ ಮೌಲ್ಯಮಾಪನದ ಫಲಿತಾಂಶ ವೈಯುಕ್ತಿಕವಾಗಿ ಮಾತ್ರ ಗೊತ್ತಾಗುತ್ತೆ. ಸಾರ್ವಜನಿಕವಾಗಿ ಬಹಿರಂಗವಾಗೋದಿಲ್ಲ. ದೃಶ್ಯ ಮಾಧ್ಯಮಗಳಾದ ಸಿನಿಮಾ, ನಾಟ್ಯ, ನಾಟಕ ಧಾರಾವಾಹಿಗಳ ನಟ, ನಿರ್ದೇಶಕ, ಸಂಕಲನಕಾರ, ಗೀತ ರಚನೆಕಾರ, ಗಾಯಕ, ಹಿನ್ನಲೆ ಗಾಯಕ, ಒಟ್ಟಾರೆ ಒಂದು ಪ್ರದರ್ಶನದ ವಿವಿಧ ವಿಭಾಗಗಳ ವಿಮರ್ಶೆ ಕಲೆಯ ಮೌಲ್ಯವನ್ನು ಹೆಚ್ಚಿಸಲು ಅಗತ್ಯ. ಆದರೆ ಅದನ್ನು ಸ್ವೀಕರಿಸುವ ಗುಣ ಆ ಒಟ್ಟು ಪ್ರದರ್ಶನದ ತಂಡದ ಸದಸ್ಯರಿಗೆ, ನಟ, ಕಲಾವಿದ ನಿದೇಶಕರಿಗಿರಬೇಕಾಗುತ್ತದೆ.

ವಿಮರ್ಶೆ ಅನ್ನೋದು ಕೇವಲ ಒಬ್ಬ ಕಲಾವಿದನ ಅಭಿಮಾನದಿಂದಲಾಗಿಯೋ ಅಥವ ಉತ್ಪ್ರೇಕ್ಷೆಯಿಂದ ಹೊಗಳೋ ಕೆಲಸವಲ್ಲ. ಅದು ಅಭಿಮಾನ ಅಷ್ಟೇ. ಅದರಿಂದ ಯಾರಿಗೂ ಪ್ರಯೋಜನವಿಲ್ಲ. ಹಿಂದೆ ರಾಜಾಶ್ರಯದ ಕವಿಗಳು ವಂದಿಮಾಗಧರು ಆ ಕೆಲಸ ಮಾಡುತ್ತಿದ್ದರು. ನಿಜವಾದ ವಿಮರ್ಶಕ ಪ್ರದರ್ಶನವೊಂದರ ಸಂಪೂರ್ಣಾಂಗಗಳ ಅವಲೋಕನ ಮಾಡಿ ಗುಣದೋಷಗಳ ಕುರಿತು ವಿಮರ್ಶೆ ಬರೆಯುತ್ತಾರೆ. ಇನ್ನೂ ಕೆಲವರು ಕೆಟ್ಟ ಅಂಶಗಳನ್ನೇ, ವ್ಯಕ್ತಿಗತ, ತಂಡದ ತೇಜೋವಧೆ ಮಾಡುವುದಕ್ಕಾಗಿಯೇ ಉದ್ದೇಶಪೂರ್ವಕವಾಗಿ ಬರೆಯುತ್ತಾರೆ. ಇದು ಪೂರ್ವಾಗ್ರಹಪಿಡಿತವಾದ ಬರಹವಾಗಿರುತ್ತದೆ. ಬರವಣಿಗೆಯಲ್ಲಿ ಇದೂ ಒಳ್ಳೆಯ ಲಕ್ಷಣವಲ್ಲ. ಯಕ್ಷಗಾನದಲ್ಲಿ ಒಂದು ಸಮಗ್ರ ವಿಮರ್ಶೆ ಎಂದರೆ ಕೇವಲ ಕಲಾವಿದ, ಭಾಗವತರದ್ದು ಮಾತ್ರ ಆಗಿರಬಾರದು, ಕಥಾವಸ್ತು, ರಂಗ ಸಂಯೋಜನೆಯಲ್ಲಿ, ವಿಭಿನ್ನತೆ, ಭಾಗವತರ, ರಾಗ ಪ್ರಸ್ತುತಿ, ಕಥೆಯ ನಡೆ, ನಿರ್ದೇಶನ, ಕಲಾವಿದನ ಪಾತ್ರ ನಿರ್ವಹಣೆ, ಸಂಕಲನ, ಸಾಹಿತ್ಯ, ಎಲ್ಲವನ್ನೂ ಅವಲೋಕಿಸಿ ಬರೆಯುವುದೇ ನಿಜವಾದ ವಿಮರ್ಶೆ. ಇದು ಅಭ್ಯಾಸದಿಂದಲಷ್ಟೇ ಸಾಧ್ಯ. ಇಂತಹ ಅಭ್ಯಾಸವನ್ನು ಯಕ್ಷಗಾನ ರಂಗದಲ್ಲಿ ಬೆಳೆಸಲಿಕ್ಕಾಗಿಯೇ ಈ ಬಾರಿ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ಆಯೋಜಿಸಿರುವ ಯಕ್ಷಗಾನ ಪ್ರದರ್ಶನದ ಬಗ್ಗೆ ವಿಮರ್ಶೆ ಬರೆಯುವಂತೆ ಪ್ರೇಕ್ಷರಿಂದ ಬರಹಗಳನ್ನು ಆಹ್ವಾನಿಸಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನೂ ಬರೆದು ಕಳುಹಿಸಿ. ಮತ್ತೆ ಸಿಗೋಣ ಮುಂದಿನ ಸಂಚಿಕೆಯಲ್ಲಿ ನಮಸ್ಕಾರ – ***ಸಂಪಾದಕರು***

**ಊರ್ವಶಿಯ ಜನನ –ಒಂದು ರೋಚಕ ಪ್ರಸಂಗ**

ಪೂರ್ವದಲ್ಲಿ ನರನಾರಾಯಣರೆಂಬ ಸಹೋದರರು ತೀವ್ರವಾದ ತಪಸ್ಸಿನಲ್ಲಿ ನಿರತರಾಗಿದ್ದರು. ಅವರ ತಪೋಭಂಗ ಮಾಡಲು ಇಂದ್ರನು ಅಪ್ಸರೆಯರ ದಂಡನ್ನೇ ಕಳುಹಿಸಿದನು. ಅಪ್ಸರೆಯರ ಕಾಟ ಮಿತಿ ಮೀರಿದಾಗ ನಾರಾಯಣನು ಒಂದು ಹೂವಿನಿಂದ ತನ್ನ ಊರುವನ್ನು (ತೊಡೆ) ಕೆರೆದುಕೊಂಡಾಗ ಒಬ್ಬ ಅಪ್ರತಿಮ ಸುಂದರಿ ಆವಿರ್ಭವಿಸಿದಳು. ಈ ರೀತಿ ನಾರಾಯಣನ ಊರುವಿನಿಂದ ಜನಿಸಿದ್ದರಿಂದ ಇವಳಿಗೆ ಊರ್ವಶಿ ಎಂಬ ಹೆಸರಾಯಿತು. ಊರ್ವಶಿಯ ಸೌಂದರ್ಯದಿಂದ ಇತರ ಅಪ್ಸರೆಯರ ಸೌಂದರ್ಯವು ಮಸುಕಾಯಿತು. ಅವರು ಲಜ್ಜಿತರಾಗಿ ಹೊರಟು ಹೋದರು. ಮುಂದೆ ಅವಳು ದೇವಲೋಕದ ನರ್ತಕಿಯಾಗುತ್ತಾಳೆ. ಒಮ್ಮೆ ವನವಾಸದಲ್ಲಿದ್ದ ಅರ್ಜುನ್ನು ದೇವೇಂದ್ರ ಸ್ವರ್ಗಕ್ಕೆ ಕರೆಸಿದ್ದ. ಆಗ ಅರ್ಜುನನನ್ನು ನೋಡಿದ ಊರ್ವಶಿಯು ಅವನಲ್ಲಿ ಅನುರಕ್ತಳಾಗಿ ಅವಳನ್ನು ಕೂಡುವಂತೆ ಕೇಳಿದಾಗ "ನೀನು ನನ್ನ ಪೂರ್ವಜನಾದ ಪೂರುವಿಗೆ ಪತ್ನಿಯಾಗಿದ್ದೆ, ಆದುದರಿಂದ ನೀನು ನನಗೆ ಮಾತೃಸಮಾನಳು. ನಿನ್ನೊಂದಿಗೆ ಸುಖಿಸುವುದು ಅಧರ್ಮ"ಎನ್ನುತ್ತಾನೆ ಅರ್ಜುನ. ಇದರಿಂದ ಕುಪಿತಳಾದ ಊರ್ವಶಿಯು "ನಪುಂಸಕನಾಗು" ಎಂದು ಅರ್ಜುನನನ್ನು ಶಪಿಸುತ್ತಾಳೆ. ಅವಳ ಶಾಪದಂತೆ ಅಜ್ಞಾತವಾಸದ ಸಂಧರ್ಭದಲ್ಲಿ ಒಂದು ವರ್ಷ ಅರ್ಜುನ ನಪುಂಸಕನಾಗಿ, ಬ್ರಹನ್ನಳೆ ಎಂಬ ಹೆಸರಿನಿಂದ ವಿರಾಟನ ಅರಮನೆಯಲ್ಲಿ ಕಳೆಯುತ್ತಾನೆ. ಸಂ.: ದಾಮೋದರ ಶೆಟ್ಟಿ, ಇರುವೈಲು

# ಕಲಾವಿದರ ಸಂಘಟನೆಗೊಬ್ಬ ನಾಯಕ “ಪಟ್ಲ” – ಪಟ್ಲೋತ್ಸವಕ್ಕೆ ನೆರೆದ ಜನಸಾಗರ

’**ಪಟ್ಲ**’ ಎನ್ನುವ ಹೆಸರೇ ಯಕ್ಷಗಾನಕ್ಕೆ ತಾರಾ ಮೌಲ್ಯವನ್ನು ತಂದುಕೊಟ್ಟದ್ದು ಎಂದರೆ ಹೆಚ್ಚಾಗಲಾರದು. ಭಾಗವತಿಕೆಯ ಮುಖೇನ ಯಕ್ಷಾಭಿಮಾನಿಗಳಿಗೆ ಪರಿಚಿತರಾದ ಪಟ್ಲ ಮುಂದೊಂದು ದಿನ ಯಕ್ಷಗಾನದ ಕಲಾವಿದರ ಪಾಲಿಗೆ ಕಾಮಧೇನುವಾಗುತ್ತಾರೆ ಎಂದು ಹಿಂದೆ ಯಾರಾದರೂ ಊಹಿಸಿದ್ದರೋ ಗೊತ್ತಿಲ್ಲ. ಈಗಂತೂ ಯಕ್ಷಧ್ರುವ ಪಟ್ಲ ಸತೀಶ ಶೆಟ್ಟರು ಕಲಾವಿದರ ಪಾಲಿಗೆ ಕಾಮಧೇನುವೇ ಆಗಿಬಿಟ್ಟಿದ್ದಾರೆ. ಹಣವಿದ್ದವನಿಗೆ ಕೊಡುವ ಮನ ಇರಲೇಬೇಕೆಂದೇನಿಲ್ಲ. ಆದರೆ ತಾನೂ ದಾನ ಮಾಡುತ್ತಾ, ಇನ್ನಷ್ಟು ದಾನಿಗಳನ್ನು ಒಗ್ಗೂಡಿಸುತ್ತಾ, ಕಲಾವಿದರ ಪಾಲಿನ ಕಷ್ಟಕ್ಕೊದಗುವುದಿದೆಯಲ್ಲಾ ಅದು ಎಲ್ಲರಿಗೂ ಬಾರದ ವಿಷಯ. ಇದಕ್ಕೇ ಪಟ್ಲ ವಿಭಿನ್ನ, ವಿಶೇಷ.

ಈ ಬಾರಿಯ ಪಟ್ಲ ಸಂಭ್ರಮದಲ್ಲಿ ಈ ಬಾರಿಯ “ಯಕ್ಷಧ್ರುವ ಪಟ್ಲ ಪ್ರಶಸ್ತಿ”ಗೆ ಭಾಜನರಾದ ಪ್ರೊ.ಎಂ.ಎಲ್. ಸಾಮಗರ ಮಾತು ಹೀಗಿದೆ – “ವಾಟ್ ಈಸ್ ಪಟ್ಲ? ಹಿ ಈಸ್ ಅ ಮಿರ್ಯಾಕಲ್” ನಿಜವಾಗಿಯೂ ಪಟ್ಲರೊಂದು ಪವಾಡವೇ ಸರಿ. ಯಕ್ಷಗಾನದ ಅಶಕ್ತ ಕಲಾವಿದರ ಬದುಕಿಗೆ ಆಶಾಕಿರಣವಾಗುವ ನಿಟ್ಟಿನಲ್ಲಿ ಪಟ್ಲರು “ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ (ರಿ)” ಅನ್ನುವ ಸಂಸ್ಥೆಯನ್ನು 2015 ರಲ್ಲಿ ಶ್ರೀ ಕಟೀಲು ಕ್ಷೇತ್ರದಲ್ಲಿ ಆರಂಭಿಸುತ್ತಾರೆ. ಒಡಿಯೂರು ಶ್ರೀಗಳ ಅನುಗ್ರಹ ಹಸ್ತದಿಂದ ಉದ್ಘಾಟಿಸಲ್ಪಡುತ್ತದೆ. 2016 ರಲ್ಲಿ ಮೊದಲ ’ಪಟ್ಲ ಸಂಭ್ರಮ’ ಮಂಗಳೂರು ಪುರಭವನದಲ್ಲಿ ಶುಭಸಂಪನ್ನಗೊಂಡಿತು. 2016ರಲ್ಲಿ ಆರಂಭಗೊಂಡ ’ಯಕ್ಷಧ್ರುವ ಪಟ್ಲ ಸಂಭ್ರಮ” ಕೊರೊನಾ ಕಾಲದಲ್ಲಿ ಬಿಟ್ಟರೆ, ಮತ್ತೆ ನಿರಂತರವಾಗಿ ವಿಶಿಷ್ಟತೆಗಳ ಜೊತೆಗೆ ನಡೆಯುತ್ತಲೇ ಬಂದಿದೆ. ವರುಷದಿಂದ ವರುಷಕ್ಕೆ ಈ ಸಂಭ್ರಮದ ಕಳೆ ಹೆಚ್ಚುತ್ತಲೇ ಬಂದಿದೆ. 2017 ರಿಂದ ನಿರಂತರವಾಗಿ ಮೇ ಕೊನೆಗೆ ಅಡ್ಯಾರ್ ಗಾರ್ಡನ್‌ನಲ್ಲಿ ಆಯೋಜನೆಯಾಗುವ ’ಪಟ್ಲ ಸಂಭ್ರಮ’ ಯಕ್ಷಗಾನದ ಅದೆಷ್ಟೋ ಕಲಾವಿದರ ಪಾಲಿಗೆ ಭರವಸೆಯ ಬೆಳಕಾದದ್ದಂತೂ ಸುಳ್ಳಲ್ಲ. ಪಟ್ಲಯಾನದ ಸಂಭ್ರಮ ಇನ್ನಷ್ಟು ಹೆಚ್ಚಲು ಕಾರಣ “ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ನ ಜೀವದಂತಿರುವ ಘಟಕಗಳು. ಇಂದಿನವರೆಗೆ ದೇಶ– ವಿದೇಶಗಳಲ್ಲೂ ಸೇರಿ ಸುಮಾರು 38ಕ್ಕೂ ಮಿಕ್ಕಿ ಘಟಕಗಳನ್ನು ಈ ಫೌಂಡೇಶನ್ ಹೊಂದಿದೆ. ಇನ್ನಷ್ಟು ಘಟಕಗಳನ್ನು ವಿಸ್ತರಿಸುವ ಯೋಜನೆ ಫೌಂಡೇಶನ್ ನದ್ದು.

ಕಳೆದ ಏಳು ವರ್ಷಗಳಲ್ಲಿ 8.5 ಕೋಟಿ ಮೊತ್ತದ ಸೇವಾ ಯೋಜನೆಯನ್ನು ಅನುಷ್ಠಾನಗೊಳಿಸಿದ ಪಟ್ಲ ಫೌಂಡೇಶನ್ ನ ಸೇವಾ ಯೋಜನೆಗಳು ಹಲವು – ಯಕ್ಷಗಾನದ ಕ್ಷೇತ್ರದ ಪ್ರಸಿದ್ಧ 5 ಮಂದಿ ಕಲಾವಿದರಿಗೆ ಒಂದು ಲಕ್ಷ ರೂಪಾಯಿ ನಗದಿನೊಂದಿಗೆ “ಪಟ್ಲ ಪ್ರಶಸ್ತಿ”. “ಪಟ್ಲ ಯಕ್ಷಾಶ್ರಯ” ಅನ್ನುವ ಯೋಜನೆಯಡಿಯಲ್ಲಿ 5 ಮಂದಿ ಈಗಾಗಲೇ ಮನೆಯನ್ನು ಪಡಕೊಂಡು ಫಲಾನುಭವಿಗಳಾಗಿದ್ದಾರೆ. 11 ಮನೆಗಳನ್ನು ನಿರ್ಮಾನಗೊಳ್ಳುತ್ತಿವೆ. ಈ ಯೋಜನೆ 100 ಮನೆಗಳನ್ನು ಅರ್ಹರಿಗೆ ನಿರ್ಮಿಸಿಕೊಡುವ ಯೋಚನೆಯದ್ದಾಗಿದೆ. ಅಷ್ಟೇ ಅಲ್ಲದೆ ಕಳೆದ ವರ್ಷದವರೆಗೆ 132 ಕಲಾವಿದರಿಗೆ ಗೃಹ ನಿರ್ಮಾಣಕ್ಕಾಗಿ 25,000 ರೂಪಾಯಿಗಳ ಸಹಾಯಧನವನ್ನು ಫೌಂಡೇಶನ್ ಕೊಟ್ಟಿದೆ. 145 ಅಶಕ್ತ ಕಲಾವಿದರಿಗೆ ತಲಾ 50,000/– ದಂತೆ ಗೌರವಧನವನ್ನು ನೀಡಿದೆ. ತನ್ನ ಘಟಕಗಳ ಅಡಿಯಲ್ಲಿ ಸುಮಾರು 350 ಕಲಾವಿದರಿಗೆ ಸಂಮಾನದ ಮುಖೇನ ಗೌರವಧನವನ್ನು ನೀಡಿ ಗೌರವಿಸಿದೆ.




ಮತ್ತೊಂದು ಮುಖ್ಯ ಯೋಜನೆಯೆಂದರೆ, ’ಅಪಘಾತ ವಿಮಾ ಯೋಜನೆ’. ಅಪಘಾತ ಚಿಕಿತ್ಸಾ ವೆಚ್ಚ 3 ಲಕ್ಷ ರೂಪಾಯಿಗಳು, ಆಕಸ್ಮಿಕ ಜೀವಹಾನಿಯಾದಲ್ಲಿ 8 ಲಕ್ಷ ರೂಪಾಯಿಗಳನ್ನು ಕುಟುಂಬಕ್ಕೆ ಪರಿಹಅರ ಧನವನ್ನಾಗಿ ಕೊಡುವ ಯೋಜನೆ. ಪ್ರತಿವರ್ಷ ಸುಮಾರು 950 ಕಲಾವಿದರು ಈ ಯೋಜನೆಯನ್ನು ಮಾಡುತ್ತಾ ಬಂದಿದ್ದಾರೆ. ಸುಮಾರು 105 ಕಲಾವಿದರಿಗೆ ತಲಾ 25,000 ರೂಪಾಯಿಗಳಂತೆ ಆರೋಗ್ಯ ಸಮಸ್ಯೆಯಿದ್ದವರ ಚಿಕಿತ್ಸಾ ವೆಚ್ಚವನ್ನು ಭರಿಸಿದ್ದಾರೆ. ಅಪಘಾತ ಹಾಗೂ ಅನಾರೋಗ್ಯದಿಂದ ವಿಧಿವಶರಾದ 25 ಮಂದಿ ಕಲಾವಿದರ ಕುಟುಂಬಕ್ಕೆ ತಲಾ 50,000 ರೂಪಾಯಿಗಳು, ರಂಗದಲ್ಲೇ ದೇವರ ಪಾದ ಸೇರಿದ ಗೇರುಕಟ್ಟೆ ಗಂಗಯ್ಯ ಶೆಟ್ಟಿಯವರ ಕುಟುಂಬಕ್ಕೆ 2.50 ಲಕ್ಷ ರೂಪಾಯಿಗಳು, ಅಪಘಾತಕ್ಕೀಡಾಗಿ ವಿಧಿವಶರಾದ ಯಕ್ಷಗಾನ ಕಲಾವಿದರಾದ ಸೌಕೂರು ಮೇಳದ ದಿನೇಶ ಮಡಿವಾಳ ಹಾಗೂ ಹಿರಿಯಡಕ ಮೇಳದ ವಾಮನ ದೇವಾಡಿಗರ ಕುಟುಂಬಕ್ಕೆ ತಲಾ 8 ಲಕ್ಷದಂತೆ ಒಟ್ಟು 16 ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡಿರುತ್ತಾರೆ. ಕಲಿಕೆಯಲ್ಲಿ ಗರಿಷ್ಠ ಅಂಕಗಳನ್ನು ಗಳಿಸಿದ ಕಲಾವಿದರ ಮಕ್ಕಳಿಗೆ ಬಂಗಾರದ ಪದಕ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ, ವಿವಿಧ ಘಟಕಗಳ ವತಿಯಿಂದ ಸುಮಾರು 650 ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿಯನ್ನು ನೀಡುವ ಕಾರ್ಯಕ್ರಮ, ಯಕ್ಷಗಾನ ತರಬೇತಿಯನ್ನು ಪಡೆಯುವ ಸುಮಾರು 90 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ತೀರಾ ಅಸಹಾಯಕ ಅರ್ಹ ಕಲಾವಿದರಿಗೆ ಮಾಸಾಶನ, ಕಲಾವಿದರಿಗೆ ಅವರ ಕುಟುಂಬದವರಿಗೆ ಪ್ರತೀ ’ಪಟ್ಲ ಸಂಭ್ರಮ’ದಂದು ಉಚಿತ ವೈದ್ಯಕೀಯ ತಪಾಸಣೆ, ಉಚಿತ ಔಷಧ ವಿತರಣೆ, ರಕ್ತದಾನ ಶಿಬಿರ ಮುಂತಾದ ಅನೇಕ ಸೇವಾಯೋಜನೆಗಳು ಪಟ್ಲ ಫೌಂಡೇಶನ್ ನದ್ದು. ತೆಂಕುತಿಟ್ಟು–ಬಡಗುತಿಟ್ಟಿನ ಪ್ರಸಿದ್ಧ 40 ಕಲಾವಿದರಿಗೆ ತಲಾ 10,000 ರೂಪಾಯಿಗಳ, 10 ಪ್ರಸಿದ್ಧ ಕಲಾವಿದರಿಗೆ ತಲಾ 20,000 ರೂಪಾಯಿಗಳ ಗೌರವ ನಿಧಿಯೊಂದಿಗೆ ಯಕ್ಷಧ್ರುವ ಕಲಾಗೌರವವನ್ನು ನೀಡಲಾಗಿದೆ. ಯಕ್ಷಧ್ರುವ ಪಟ್ಲ ಪ್ರಕಾಶನದ ಮೂಲಕ ಪ್ರಕಟಗೊಂಡ ಪುಸ್ತಕಗಳು ಇಂತಿವೆ – ದಿ.ಬೊಟ್ಟಿಕೆರೆ ಪುರುಷೋತ್ತಮ ಪೂಂಜರ “ಅಂಬುರುಹ” – ಕುಶ ಮತ್ತು ಲವ ಎಂಬ 30 ಪ್ರಸಂಗಗಳ ಕೃತಿ, ದಿ.ಬಲಿಪ ನಾರಾಯಣ ಭಾಗವತರ “ಜಯಲಕ್ಷ್ಮೀ” – 14 ಪ್ರಸಂಗಗಳ ಕೃತಿ, ದಿ. ಡಾ. ಶಿಮಂತೂರು




ನಾರಾಯಣ ಶೆಟ್ಟರ "ಛಂದಸ್ವತೀ" ಎನ್ನುವ ಕೃತಿ, ಶ್ರೀ ಗಣೇಶ್ ಕೊಲೆಕಾಡಿಯವರ "ಪದ್ಮಾಂಶು"

ಪಟ್ಲ ಟ್ರಸ್ಟ್ ನ ಮತ್ತೊಂದು ವಿಶೇಷತೆಯೆಂದರೆ, ತೆಂಕು–ಬಡಗು ತಿಟ್ಟಿನ ಮೇಲಗಳ ಕಲಾವಿದರಿಗಾಗಿಯೇ ಕ್ರೀಡಾಕೂಟವನ್ನು 2018 ರಲ್ಲಿ ಆಯೋಜಿಸಿದ್ದು. ಅದರಲ್ಲಿ ಭಾಗವಹಿಸಿದ ಕಲಾವಿದರಿಗಂತೂ ಸಂತೋಷದ ಭಾವ.

ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ 2020 ಹಾಗೂ 2021 ನೇ ಇಸವಿಯಲ್ಲಿ ಲಾಕ್ ಡೌನ್ ಅವಧಿಯಲ್ಲಿ ಯಕ್ಷಗಾನ, ರಂಗಭೂಮಿ ಹಾಗೂ ದೈವಾರಾದನೆಯ ಕ್ಷೇತ್ರದ 3500 ಕಲಾವಿದರಿಗೆ ಒಟ್ಟು 70 ಲಕ್ಷ ಮೌಲ್ಯದ ಆಹಾರ ಕಿಟ್ ನ್ನು ಕೂಡ ಫೌಂಡೇಶನ್ ಒದಗಿಸಿದೆ.

ಇತ್ತೀಚೆಗೆ ನಡೆದ 2023 ರ "ಯಕ್ಷಧ್ರುವ ಪಟ್ಲ ಸಂಭ್ರಮ" ದಲ್ಲಿಯೂ ಇದೇ ಕ್ರಮ ಮುಂದುವರಿದಿದೆ. ಅದರಲ್ಲೂ ವಿಶೇಷವಾಗಿ ಯಕ್ಷಗಾನ ಮಾತ್ರವಲ್ಲದೇ ರಂಗಭೂಮಿ, ದೈವಾರಾಧನೆ, ಜಾನಪದ ಮುಂತಾದ ಕ್ಷೇತ್ರಗಳ ಕಲಾವಿದರಿಗೂ ಅಪಘಾತ ವಿಮಾ ಯೋಜನೆಯ ಅವಕಾಶವಿತ್ತು. ಅದರ ಮೌಲ್ಯವನ್ನು ಸ್ವತಃ ಫೌಂಡೇಶನ್ ಭರಿಸಿತು. ಎಂದಿನಂತೆ ವಿದ್ಯಾರ್ಥಿ ವೇತನ, ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಂಗಾರದ ಪದಕ, ಉಚಿತ ಆರೋಗ್ಯ ತಪಾಸಣೆ, ಔಷಧ ವಿತರಣೆ, ರಕ್ತದಾನ ಶಿಬಿರ, ಉಚಿತ ಕಣ್ಣು ಪರೀಕ್ಷೆ, ಕನ್ನಡಕ ವಿತರಣೆಯೂ ಇತ್ತು.

ತೆಂಕು– ಬಡಗಿನ 25 ಕಲಾವಿದರಿಗೆ ಗೃಹ ನಿರ್ಮಾಣಕ್ಕೆ ತಲಾ 25,000 ರೂಪಾಯಿಗಳಂತೆ ನೆರವು, 20 ಮಂದಿ ಕಲಾವಿದರಿಗೆ ತಲಾ 50,000 ರೂಪಾಯಿಗಳಂತೆ ಆರ್ಥಿಕ ನೆರವು, 7 ಮಂದಿ ಯಕ್ಷಗಾನ ಕಲಾವಿದರಿಗೆ 20,000 ರೂಪಾಯಿಗಳ ಗೌರವಧನ ಸಹಿತ 'ಯಕ್ಷಧ್ರುವ ಕಲಾ ಗೌರವ', ವಿವಿಧ ಕ್ಷೇತ್ರಗಳ 14 ಮಂದಿಗೆ ತಲಾ 20,000 ರೂಪಾಯಿಗಳ ಗೌರವಧನ ಸಹಿತ ಸಂಮಾನ, ದೈವಾರಾಧನೆಯ ಸಂದರ್ಭದಲ್ಲಿ ಇಹಲೋಕ ತ್ಯಜಿಸಿದ ಶ್ರೀ ಕಾಮತು ಅಜಿಲ ಹಾಗೂ ಕಟೀಲು ಮೇಳದ ರಂಗದಲ್ಲೇ ಸ್ವರ್ಗಸ್ಥರಾದ ಶ್ರೀ ಗುರುವಪ್ಪ ಬಾಯಾರು ಕುಟುಂಬಕ್ಕೆ ತಲಾ ಒಂದು ಲಕ್ಷ ರೂಪಾಯಿಗಳ ಗೌರವಧನ ನೀಡಲಾಯಿತು.

ಈ ಬಾರಿಯ 'ಪಟ್ಲ ಪ್ರಶಸ್ತಿ'ಯನ್ನು ಶ್ರೀ ಎಂ.ಎಲ್ ಸಾಮಗರಿಗೆ ಒಂದು ಲಕ್ಷರೂಪಾಯಿಗಳ ಗೌರವಧನದೊಂದಿಗೆ ಪ್ರದಾನ ಮಾಡಲಾಯಿತು. ಎಂ.ಎಲ್ ಸಾಮಗರು ತಮ್ಮ ತಂದೆಯವರ ಹೆಸರಿನಲ್ಲಿ ಟ್ರಸ್ಟ್ ಗೆ 50 ಸೆಂಟ್ಸ್ ಜಾಗವನ್ನು ದಾನವಾಗಿ ನೀಡಿದವರು.

ಈ ಬಾರಿಯ ಮತ್ತೊಂದು ವಿಶೇಷವೆಂದರೆ ತೆಂಕುತಿಟ್ಟು ಯಕ್ಷಗಾನ ಸ್ಪರ್ಧೆ – ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜನೆಗೊಂಡಿತ್ತು. ಪ್ರಥಮ 50,000ರೂ., ದ್ವಿತೀಯ 30,000 ರೂ. ತೃತೀಯ 20,000 ರೂ., 5 ವೈಯಕ್ತಿಕ ವಿಭಾಗದಲ್ಲಿ ಪ್ರಥಮ, ದ್ವಿತೀಯ ಕ್ರಮವಾಗಿ 5000 ರೂ, 3000 ರೂ, ತಂಡಶ್ರೇಷ್ಠ 2000 ರೂಪಾಯಿಗಳ ನಗದಿನೊಂದಿಗೆ ಪ್ರಶಂಸಾ ಪತ್ರ, ಶಾಶ್ವತ ಫಲಕ. ಭಾಗವಹಿಸಿದ ಎಲ್ಲಾ ತಂಡಕ್ಕೂ 10,000 ರೂಪಾಯಿಗಳ ಗೌರವಧನವನ್ನು ನೀಡಲಾಗಿತ್ತು. ಅದರ ಜೊತೆಗೆ ಕರಾವಳಿಯ ಪ್ರತಿಷ್ಠಿತ ಆಹ್ವಾನಿತ ತಂಡಗಳಿಂದ "ಯಕ್ಷಧ್ರುವ ಕಲಾವೈಭವ" ಎನ್ನುವ ಸ್ಪರ್ಧೆಯೂ ಇತ್ತು. ಸುಮಾರು 30,000 ಕ್ಕೂ ಮಿಕ್ಕಿ ಕಲಾಭಿಮಾನಿಗಳು ಭಾಗಿಯಾದ ಅಭೂತಪೂರ್ವ ಕಾರ್ಯಕ್ರಮವಿದು.

ಪ್ರತೀ ಪಟ್ಲ ಸಂಭ್ರಮದಲ್ಲೂ ವೃತ್ತಿಪರ, ಹವ್ಯಾಸಿ/ಮಹಿಳಾ, ಪ್ರೇಕ್ಷಕ ವರ್ಗಕ್ಕೆ ಅದೃಷ್ಟಶಾಲಿಗಳಾಗುವ ಅವಕಾಶವಿತ್ತು. ಸೊಗಸಾದ ಭೋಜನ ವ್ಯವಸ್ಥೆಯಿತ್ತು. ಯಕ್ಷಗಾನ ವೈಭವ, ತಾಳಮದ್ದಳೆ, ಮಹಿಳಾ ಯಕ್ಷಗಾನಗಳ ರಸದೌತಣವಿತ್ತು. ಪಟ್ಲರ, ಅವರ ತಂಡದ ನಗೆ ಮೊಗದ ಸ್ವಾಗತವಿತ್ತು.


ಒಟ್ಟಾರೆಯಾಗಿ ಪಟ್ಲ ಸತೀಶ ಶೆಟ್ಟರ ಮುಂದಾಳತ್ವ, ಶ್ರೀ ಸದಾಶಿವ ಶೆಟ್ಟಿ ಕನ್ಯಾನ, ಶ್ರೀ ಶಶಿಧರ ಶೆಟ್ಟಿ ಬರೋಡಾರಂತಹ ಮಹಾಪೋಷಕರ ಸಹಕಾರ, ಅನೇಕ ಟ್ರಸ್ಟಿಗಳ ಸಹಕಾರ, ಜನ ಬೆಂಬಲ, ಕಲಾಭಿಮಾನಿಗಳ ಸಹಕಾರದೊಂದಿಗೆ "ಯಕ್ಷಧ್ರುವ ಪಟ್ಲ ಫೌಂಡೇಶನ್(ರಿ) ಉತ್ತುಂಗಕ್ಕೇರಲಿ, ಇದರ ಕಾರ್ಯಗಳು ವಿಶ್ವವ್ಯಾಪಿಯಾಗಲಿ, ಕಲಾವಿದರ ಬದುಕು ಇದರಿಂದ ಸೊಗಸಾಗಲಿ, ಕಲಾಮಾತೆ ಆಶೀರ್ವಾದ ಸದಾ ಇವರ ಮೇಲಿರಲಿ ಎಂಬುದು ಕಲಾಭಿಮಾನಿಗಳ ಆಶಯ.

***ಲೇಖಕರು: ಸಾಯಿ ಸುಮಾ ಎಂ ನಾವುಡ***

## ಕ್ರಾಂತಿಯ ಸರದಾರ–ಕುಂಡಾವು ಮೇಳದ ಗುರಿಕಾರ–ಮೇಳ ದರ್ಪಣ ಸಂಚಿಕೆ 2

"ಇರಾ ಶ್ರೀ ಸೋಮನಾಥೇಶ್ವರ ಯಕ್ಷಗಾನ ಮಂಡಳಿ" ಎಂಬ ಮೇಳವು 1940–70 ರ ದಶಕದಲ್ಲಿ ಕುಂಡಾವು ಮೇಳ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಹೊಂದಿತ್ತು. ಕಟೀಲು ಮೇಳದ ಅಂದಿನ ಸಂಚಾಲಕರಾಗಿದ್ದ, ಯಕ್ಷಗಾನದ ಬಗ್ಗೆ ಅಪಾರ ಜ್ಞಾನ ಹೊಂದಿದ್ದಲ್ಲದೇ, ಸ್ವತಃ ಯಕ್ಷಗಾನ ಅರ್ಥಧಾರಿಗಳೂ ಆಗಿದ್ದ ದಿ. ಕಲ್ಲಾಡಿ ಕೊರಗ ಶೆಟ್ಟಿಯವರು 1942 ರಲ್ಲಿ ಇರಾ ಶ್ರೀ ಸೋಮನಾಥೇಶ್ವರ ಯಕ್ಷಗಾನ ಮಂಡಳಿ ಸ್ಥಾಪಿಸಿದರು. ಪ್ರಾರಂಭದಲ್ಲಿ ಹರಕೆ ಹಾಗೂ ಸೇವಾ ರೂಪದಲ್ಲಿ ಯಕ್ಷಗಾನ ಪ್ರದರ್ಶನ ನೀಡುತ್ತಿತ್ತು. ಆದರೆ, ಈ ಹರಕೆ ಪ್ರದರ್ಶನಗಳು ಆರ್ಥಿಕವಾಗಿ ಮೇಳಕ್ಕೂ, ಕಲಾವಿದರಿಗೂ ಯಾವುದೇ ಪ್ರಯೋಜನ ಇಲ್ಲ ಎಂದು ಮನಗಂಡ ಕೊರಗ ಶೆಟ್ಟಿಯವರು, ಮುಂದಿನ ತಿರುಗಾಟದಲ್ಲಿ ಒಂದು ಹೊಸ ಕ್ರಾಂತಿಗೆ ಕಾರಣರಾದರು. ಹರಕೆದಾರರ ಸಂಖ್ಯೆ ಕಡಿಮೆಯಾದ ಕಾರಣ, ಕೇವಲ ಹರಕೆಯನ್ನೇ ನಂಬಿದರೆ ಕಷ್ಟ ಎಂದರಿತು, ಹರಕೆದಾರರ ಬದಲು, ನೇರವಾಗಿ ಪ್ರೇಕ್ಷಕರನ್ನೇ ಯಕ್ಷಗಾನಕ್ಕೆ ಸೆಳೆಯುವ ಕ್ರಾಂತಿಕಾರಕ ಎಂದೇ ಎನಿಸಬಹುದಾದ ಒಂದು ಮಹತ್ವಪೂರ್ಣವಾದ ನಿರ್ಧಾರ ಕೈಗೊಂಡರು. ಅದುವೇ, ಟೆಂಟ್ ಯಕ್ಷಗಾನ ಮೇಳ. ಇರಾ ಮೇಳವನ್ನೇ "ಇರಾ ಶ್ರೀ ಸೋಮನಾಥೇಶ್ವರ ಯಕ್ಷಗಾನ

ನಾಟಕ ಸಭಾ" ಎಂಬ ಹೆಸರಿನಲ್ಲಿ ತಿರುಗಾಟ ಆರಂಭಿಸಿದರು. ಉತ್ತಮ ಧ್ವನಿ ಬೆಳಕಿನ ವ್ಯವಸ್ಥೆ, ಟೆಂಟ್, ಅದಕ್ಕೆ ಸರಿ ಹೊಂದುವ ರಂಗಸ್ಥಳ, ಹೊಸ ವೇಷಭೂಷಣ, ಪ್ರೇಕ್ಷಕರು ಆಸೀನರಾಗಲು ಸುಖಾಸನಗಳ ವ್ಯವಸ್ಥೆ, ಅತ್ಯುತ್ತಮ ಕಲಾವಿದರ ಸೇರ್ಪಡೆಯೊಂದಿಗೆ, ನಿಗದಿತ ಟಿಕೇಟ್ ದರದಲ್ಲಿ ಪ್ರದರ್ಶನ ನೀಡುವುದರೊಂದಿಗೆ ಕುಂಡಾವು ಟೆಂಟ್ ಮೇಳ ಹೊರಡಿತು ಮಾತ್ರವಲ್ಲ, ಪ್ರಥಮ ತಿರುಗಾಟದಲ್ಲಿ ಯಶಸ್ವಿಯೂ ಆಯಿತು. "ಆ ಕಾಲದಲ್ಲಿ, ಯಕ್ಷಗಾನ ಮೇಳ ಎಂದರೆ ಕಲಾವಿದರಿಗೆ ಊಟದ ವ್ಯವಸ್ಥೆ ಮಾತ್ರ, ಸಂಬಳ ನಿಶ್ಚಿತವಲ್ಲ" ಎಂಬ ಅಂದಿನ ಯಕ್ಷಗಾನ ಮೇಳದ ಸ್ಥಿತಿಯು, ಕುಂಡಾವು ಟೆಂಟ್ ಮೇಳದಿಂದಾಗಿ, ಯಕ್ಷಗಾನ ಕಲಾವಿದರಿಗೆ ಉತ್ತಮ ಎನ್ನಬಹುದಾದ ವೇತನವೂ ದೊರಕುವಲ್ಲಿ ಯಶಸ್ವಿಯಾಯಿತು.



ಮುಂದಿನ ತಿರುಗಾಟದಲ್ಲಿ, ಕಲ್ಲಾಡಿ ಕೊರಗ ಶೆಟ್ಟರು ಯಕ್ಷಗಾನದಲ್ಲಿ ಇನ್ನೊಂದು ಕ್ರಾಂತಿ ತಂದರು. ಅದುವೇ "ತುಳು ಯಕ್ಷಗಾನ ಪ್ರಸಂಗಗಳ ಪ್ರದರ್ಶನ". ತುಳುನಾಡಿನ ಮಣ್ಣಿನ ಸಾಹಸೀ ವೀರರಾದ "ಕೋಟಿ ಚೆನ್ನಯ" ಪ್ರಸಂಗವು ಕುಂಡಾವು ಮೇಳದಲ್ಲಿ ಪ್ರಥಮವಾಗಿ ಪ್ರದರ್ಶನಗೊಂಡಿತು. ತುಳು ಭಾಷೆಯು ಕರಾವಳಿಯ ಜನಸಾಮಾನ್ಯರ ಭಾಷೆಯಾದ ಕಾರಣ, ಯಕ್ಷಗಾನ ರಸಿಕರು ತುಳು ಪ್ರಸಂಗಗಳನ್ನು ಮೆಚ್ಚಿಕೊಂಡರು. ನಂತರದಲ್ಲಿ "ತುಳುನಾಡ ಸಿರಿ, ಕೋರ್ದಬ್ಬು ಬಾರಗ, ದೇವುಪೂಂಜ ಪ್ರತಾಪ, ಕಾಂತಬಾರೆ–ಬುಧಬಾರೆ" ಮುಂತಾದ ತುಳು ಪಾಡ್ದನ ಆಧರಿತ ತುಳು ಪ್ರಸಂಗಗಳು ಪ್ರದರ್ಶನಗೊಂಡವು. ತುಳು ಭಾಷಿಕರಾದ ತುಳುವರ ದೈವಗಳ ಕಥೆ ಸಾರುವ ಈ ಪ್ರಸಂಗಗಳೂ ಕುಂಡಾವು ಮೇಳದಲ್ಲಿ ಯಶಸ್ವಿಯಾದವು. ಇದರೊಂದಿಗೆ ಮಾಮೂಲಿ ಕನ್ನಡ ಪೌರಾಣಿಕ ಪ್ರಸಂಗಗಳೂ ಪ್ರದರ್ಶನಗೊಂಡು ಕುಂಡಾವು ಮೇಳವು ಯಶಸ್ವಿಯಾಗಿ ತಿರುಗಾಟ ನಡೆಸಿದ ಹೆಗ್ಗಳಿಕೆ ಪಡೆಯಿತು.

ಅಂದಿನ ಕುಂಡಾವು ಮೇಳದಲ್ಲಿ ತಿರುಗಾಟ ನಡೆಸದ ಯಕ್ಷಗಾನ ಕಲಾವಿದರೇ ಇರಲಿಲ್ಲ ಎಂಬುದು ವಾಸ್ತವಿಕ ವಿಚಾರ. ಸುಪ್ರಸಿದ್ಧ ಭಾಗವತರಾದರಾದ ಅಗರಿ ಶ್ರೀನಿವಾಸ ಭಾಗವತರು, ಬೆಳಿಂಜೆ ಮೈಂದಪ್ಪ ರೈ, ಹಿಂದಿನ ಹಿರಿಯ ಹಾಗೂ ಕಿರಿಯ ಬಲಿಪ ನಾರಾಯಣ ಭಾಗವತರು, ಕುರಿಯ ಗಣಪತಿ ಶಾಸ್ತ್ರಿ, ಡಾ.ಶೇಣಿ ಗೋಪಾಲಕೃಷ್ಣ ಭಟ್, ರಾಮದಾಸ ಸಾಮಗ, ಕುಂಬ್ಳೆ ಸುಂದರ ರಾವ್, ಮಿಜಾರು ಅಣ್ಣಪ್ಪ, ಕಡಬ ಸಾಂತಪ್ಪ, ಗೋವಿಂದ ಭಟ್, ಕಡಂದೇಲು ಪುರುಷೋತ್ತಮ ಭಟ್, ಯಕ್ಷಗಾನ ಗುರು ವೀರಭದ್ರ ನಾಯಕ್, ವಂಡ್ಸೆ ನಾರಾಯಣ ಗಾಣಿಗ, ಮಾನ್ಯ ರಾಮಣ್ಣ, ಬೋಳಾರ ನಾರಾಯಣ ಶೆಟ್ಟಿ, ಪೈವಳಿಕೆ ಐತ್ತಪ್ಪ, ಮೂಡುಬಿದಿರೆ ಮಾಧವ ಶೆಟ್ಟಿ, ಕರವೋಲು ದೇರಣ್ಣ ಶೆಟ್ಟಿ, ಪಟ್ಲಗುತ್ತು ಮಹಾಬಲ ಶೆಟ್ಟಿ, ಅಳಿಕೆ ರಾಮಯ್ಯ ರೈ, ಸಂಪಾಜೆ ಶೀನಪ್ಪ ರೈ, ದಿನೇಶ ಅಮ್ಮಣ್ಣಾಯ, ಪೆರುವಾಯಿ ನಾರಾಯಣ ಶೆಟ್ಟಿ, ಉರ್ವ ನಾರಾಯಣ, ರಾಘವದಾಸ್ ಬಜ್ಪೆ, ಅರುವ ಕೊರಗಪ್ಪ ಶೆಟ್ಟಿ, ಅಳಿಕೆ ಲಕ್ಷ್ಮಣ ಶೆಟ್ಟಿ, ಕಾಟುಕುಕ್ಕೆ ಕೊರಗ ನಾಯ್ಕ, ಪುತ್ತಿಗೆ ಕುಮಾರ ಗೌಡ ಮುಂತಾದ ಘಟಾನುಘಟಿ ಯಕ್ಷಗಾನ ಕಲಾವಿದರು ಕುಂಡಾವು ಮೇಳದಲ್ಲಿ ತಿರುಗಾಟ ನಡೆಸಿದವರೇ ಹೌದು. (ಈ ಪಟ್ಟಿಯಲ್ಲಿ ಇನ್ನಷ್ಟು ಕಲಾವಿದರೂ ಇದ್ದಾರೆ ಎಂಬುದನ್ನು ಗಮನಿಸಿ.) ಇದೇ ಕಾಲದಲ್ಲಿ, ಕುಂಡಾವು ಮೇಳದ ಯಶಸ್ಸನ್ನು ಕಂಡು ಹಲವಾರು ಟೆಂಟ್ ಮೇಳಗಳು ಹುಟ್ಟಿಕೊಂಡವು. ಈ ಕಾಲದಲ್ಲಿ ಯಕ್ಷಗಾನದ ವಿಶಿಷ್ಟ ಎನಿಸಬಹುದಾದ "ಜೋಡಾಟ"ಗಳು ಅವಿಷ್ಕಾರಗೊಂಡವು. ಸ್ಪರ್ಧಾತ್ಮಕ ನೆಲೆಯಲ್ಲಿ ಮೇಳಗಳ ನಡುವೆ ನಡೆಯುವ ಈ ಜೋಡಾಟಗಳಲ್ಲಿ ಕುಂಡಾವು ಮೇಳವು ಹಲವಾರು ಪ್ರಶಸ್ತಿ, ಬಹುಮಾನ ಗಳಿಸುವಲ್ಲಿ ಸಫಲವಾಯಿತು. ಕುಂಡಾವು ಮೇಳದಲ್ಲಿ, ಅಂದು ಪುಂಡುವೇಷಧಾರಿಯಾಗಿದ್ದ ಅಳಿಕೆ ರಾಮಯ್ಯ ರೈಗಳು ಜೋಡಾಟಗಳಲ್ಲಿ ಚಿನ್ನದ ಪದಕ, ಉಂಗುರ, ಕಡಗ ಗಳಿಸಿದ್ದು ಕುಂಡಾವು ಮೇಳದಲ್ಲಿಯೇ. ಜೋಡಾಟಗಳಲ್ಲಿ ಮೇಲುಗೈ ಸಾಧಿಸಿದ ಕುಂಡಾವು ಮೇಳ ಅತ್ಯಂತ ಪ್ರಸಿದ್ಧ ಆಯಿತು



ಎಂ.ಶಾಂತರಾಮ ಕುಡ್ವ

ಕುಂಡಾವು ಮೇಳ ಆರಂಭವಾದ ನಂತರ, ಯಕ್ಷಗಾನಕ್ಕೆ ಅಪಾರ ಪ್ರಯೋಜನ ದೊರಕಿತು ಎಂಬುದನ್ನು ಉಲ್ಲೇಖಿಸದಿದ್ದರೆ, ಅದೊಂದು ಯಕ್ಷಗಾನ ಇತಿಹಾಸಕ್ಕೆ ಅಪಚಾರ ಮಾಡಿದಂತೆ ಆದೀತು. ಯಕ್ಷಗಾನ ಕ್ಷೇತ್ರದಲ್ಲಿ ದೊಡ್ಡ ತಿರುವು ನೀಡಿದ್ದೇ ಕುಂಡಾವು ಮೇಳ. ಆಧುನಿಕ ಸೌಲಭ್ಯದೊಂದಿಗೆ ಟೆಂಟ್ ಮೇಳದ ಅವಿಷ್ಕಾರ, ತುಳುನಾಡಿನ ಸಂಸ್ಕೃತಿ, ಇತಿಹಾಸ ಬಿಂಬಿಸುವ ತುಳು ಪ್ರಸಂಗಗಳ ಪ್ರದರ್ಶನ ಇವು ಅಂದಿನ ಕಾಲದಲ್ಲಿ, " ಯಕ್ಷಗಾನವು ತನ್ನ ಅಸ್ತಿತ್ವವನ್ನೇ ಕಳೆಯಬಲ್ಲ" ದುರಂತವನ್ನು ತಪ್ಪಿಸುವಲ್ಲಿ ತನ್ನದೇ ಆದ ದೊಡ್ಡ ಕಾಣಿಕೆ ನೀಡಿದ್ದನ್ನು ಮರೆಯುವ ಹಾಗೆಯೇ ಇಲ್ಲ. ಯಕ್ಷಗಾನ ಕಲಾವಿದರಿಗೆ ಸರಿಯಾದ ವೇತನ ನೀಡಲು ಆರಂಭವಾದುದೇ ಕುಂಡಾವು ಮೇಳ ಪ್ರಾರಂಭಗೊಂಡ ನಂತರವೇ. ಯಕ್ಷಗಾನ ಕಲಾವಿದರಿಗೆ ಸರಿಯಾದ ವೇತನವಿಲ್ಲದ ಕಾಲದಲ್ಲಿ, ಒಂದು ಭದ್ರತೆ ದೊರಕಿದ್ದಲ್ಲದೇ, ಮೇಳಗಳಲ್ಲಿ ಶಿಸ್ತು ಕಾಣುವಂತಾಯಿತು. ಕುಂಡಾವು ಮೇಳದ ಯಶಸ್ಸಿನಿಂದಾಗಿ, ತದನಂತರ, ಹಲವಾರು ಯಕ್ಷಗಾನದ ಡೇರೆ ಮೇಳಗಳು ಹುಟ್ಟಿಕೊಂಡು, ಯಕ್ಷಗಾನವು ಇಂದಿಗೂ ಬೆಳೆದು ಬಂದಿದೆ. ಇಂದು ಯಕ್ಷಗಾನದ ಡೇರೆ ಮೇಳಗಳು ಕೇವಲ ಎರಡೇ ಇರಬಹುದು. ಅದೂ, ಬಡಗುತಿಟ್ಟಿನ ಸಾಲಿಗ್ರಾಮ ಹಾಗೂ ಪೆರ್ಡೂರು ಮೇಳ ಮಾತ್ರ. ಆದರೆ, ಕುಂಡಾವು ಡೇರೆ ಮೇಳದ ಯಶಸ್ಸಿನಿಂದ ಉತ್ತೇಜನಗೊಂಡು, ನಂತರದಲ್ಲಿ ಸುಮಾರು 30ಕ್ಕೂ ಹೆಚ್ಚು ಡೇರೆ ಮೇಳಗಳು, ಆ ಕಾಲಘಟ್ಟದಲ್ಲಿ ಯಕ್ಷಗಾನ ರಂಗದಲ್ಲಿ ಸಂಚಲನ ಮೂಡಿಸಿತ್ತು. ಕಲ್ಲಾಡಿ ಕೊರಗ ಶೆಟ್ಟರ ದೂರದೃಷ್ಟಿ, ಸಮರ್ಥ ಯಜಮಾನಿಕೆ, ಯಕ್ಷಗಾನದ ಬಗ್ಗೆ ಇರುವ ಅಪಾರ ಜ್ಞಾನ ಎಲ್ಲವೂ ಮೇಳೈಸಿ, ಕಲ್ಲಾಡಿ ಕೊರಗ ಶೆಟ್ಟರು "ಆಧುನಿಕ ಯಕ್ಷಗಾನ ಮೇಳದ ಪ್ರವರ್ತಕ" ಎನಿಸಿಕೊಂಡರು. ಸುಮಾರು 4 ದಶಕಗಳ ಕಾಲ ಯಕ್ಷಗಾನ ರಂಗದಲ್ಲಿ ವಿಜೃಂಭಿಸಿದ ಕುಂಡಾವು ಮೇಳವು ನಂತರ ತನ್ನ ತಿರುಗಾಟಕ್ಕೆ ಕೊನೆ ಹಾಡಿತು.

***ಲೇಖಕರು: ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಬಡಗಿನ ಬೆಡಗಿನ ಸ್ತ್ರೀ ವೇಷಧಾರಿ – ಕುಂಜಾಲು ವಿಷ್ಣುಮೂರ್ತಿ ಬಾಸ್ರಿ




ಬಡಗುತಿಟ್ಟು ಯಕ್ಷಗಾನ ರಂಗದ ತವರೂರು ಎಂದು ಕರೆಯಲ್ಪಡುವ ಬ್ರಹ್ಮಾವರ ಸುತ್ತುಮುತ್ತಲಿನ ಹಾರಾಡಿ ಮಟ್ಪಾಡಿ, ನೀಲಾವರ, ಕುಂಜಾಲು, ಪೇತ್ರಿ ಮುಂತಾದ ಗ್ರಾಮಗಳ ನೂರಾರು ಕಲಾವಿದರು ಯಕ್ಷಗಾನ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಯಕ್ಷಗಾನ ರಂಗದ ದಂತ ಕಥೆಗಳಾದ ಹಾರಾಡಿ ರಾಮ ಗಾಣಿಗರು, ಕುಷ್ಟ ಗಾಣಿಗರು ಮತ್ತು ಅವರ ಕುಟುಂಬವರ್ಗ, ಮಟಪಾಡಿ ವೀರಭದ್ರ ನಾಯಕರು ಅವರ ಕುಟುಂಬವರ್ಗ. ಭಾಗವತಿಕೆಯ ಹೊಸ ಶೈಲಿಯನ್ನು ನಿರೂಪಿಸಿದ ಕುಂಜಾಲು ಶೇಷಗಿರಿ ಕಿಣಿ, ನೀಲಾವರ ರಾಮಕೃಷ್ಣಯ್ಯ, ಗೋರ್ಪಾಡಿ ವಿಠಲಯ್ಯ, ಗೊದ್ದನಕಟ್ಟೆ ಭಾಗವತರು, ಮದ್ದಳೆಗಾರ ಮಂಜುನಾಥ ಪ್ರಭುಗಳು, ಹಾಸ್ಯ ಚಕ್ರವರ್ತಿ ಕುಂಜಾಲು ರಾಮಕೃಷ್ಣ, ಕಲಾವಿದರಾದ ನೀಲಾವರ ಮಹಾಬಲ ಶೆಟ್ಟಿ, ಪೇತ್ರಿ ಮಾದು ನಾಯಕ್, ಮೇಳದ ಯಜಮಾನನಾಗಿ, ಸ್ತ್ರೀ ವೇಷಧಾರಿಯಾಗಿ ಖ್ಯಾತಿವೆತ್ತ ನೀಲಾವರ ಸುಬ್ಬಣ್ಣ ಶೆಟ್ಟಿ, ನೀಲಾವರ ಕೃಷ್ಣಯ್ಯ ಶೆಟ್ಟಿ, ಖ್ಯಾತ ಬಣ್ಣದ ವೇಷಧಾರಿ ಎಳ್ಳಂಪಳ್ಳಿ ಜಗನ್ನಾಥ ಆಚಾರಿ, ಯಕ್ಷಗಾನದ ಗುರುಗಳಾದ ಲಕ್ಷ್ಮಿ ನಾರಾಯಣಯ್ಯ ಸಹೋದರರು, ಇವರೆಲ್ಲರು ಕುಂಜಾಲಿನ ಆಸುಪಾಸಿನವರು. ಇದೇ ಪರಂಪರೆಯಲ್ಲಿ ಸಾಗಿ ಬಂದು ಬಡಗುತಿಟ್ಟಿನ ಬ್ರಹ್ಮಾವರ ಶೈಲಿಯ ಖ್ಯಾತಿವೆತ್ತ ಸ್ತ್ರೀ ವೇಷಧಾರಿಗಳಲ್ಲಿ ಕುಂಜಾಲು ವಿಷ್ಣುಮೂರ್ತಿ ಬಾಸ್ರಿಯವರು ಒಬ್ಬರು.

ಬಡಗುತಿಟ್ಟಿನ ಸ್ತ್ರೀವೇಷ ಪರಂಪರೆಯಲ್ಲಿ, ಮೊದಲ ತಲೆಮಾರಿನಲ್ಲಿ ಕೊಕ್ಕರ್ಣೆ ನರಸಿಂಹ ಕಾಮತ್, ಕೊಳ್ಕೆಬೈಲು ಶೀನ ನಾಯಕ್, ಹಾರಾಡಿ ನಾರಾಯಣ ಗಾಣಿಗ, ನಂತರದ ತಲೆಮಾರಿನ ಹೆರ್ಂಜಾಲು ಸಹೋದರರು, ಅರಾಟೆ ಮಂಜುನಾಥ, ಕೋಟ ವೈಕುಂಠ, ಎಂ.ಎ ನಾಯಕ್, ವಂಡ್ಸೆ ನಾರಾಯಣ, ಮ ಹೊಸಂಗಡಿ ರಾಜೀವ ಶೆಟ್ಟಿ, ರಾಮ ನಾಯರಿ, ಹಾರಾಡಿ ರಮೇಶ ಗಾಣಿಗ, ಜೋಗು ಕುಲಾಲರ ಸಾಲಿನ ಇನ್ನೋರ್ವ ಖ್ಯಾತಿವೆತ್ತ ಕಲಾವಿದರು ಬಾಸ್ರಿಯವರು. ಸ್ತ್ರಿ ಸಹಜ ಒನಪು ವೈಯ್ಯಾರ, ಪಾತ್ರಕೊಪ್ಪುವ ಆಳಂಗ, ಹೆಚ್ಚೂ ಅಲ್ಲದ ಕಡಿಮೆಯೂ ಅಲ್ಲದ ಹಿತಮಿತವಾದ ಮಾತು, ವೀರರಸದ ಕಸೆ ವೇಷಕ್ಕೆ ಹೇಳಿ ಮಾಡಿಸಿದ ಸ್ವರ ಆಳಂಗ, ಅಪಾರ ಪ್ರತ್ಯುತ್ಪನ್ನಮತಿತ್ವದಿಂದ ಬಡಗು ಬೆಡಗಿನ ಸಾಂಪ್ರದಾಯದ ಇನ್ನೊಂದು ಕೊಂಡಿಯಾಗಿ ಇವರನ್ನು ಗುರುತಿಸಬಹುದು.

ಉಡುಪಿ ತಾಲೂಕು ಬ್ರಹ್ಮಾವರ ಸಮೀಪ ಕುಂಜಾಲಿನ ಮಡಿವಂತ ಪೌರೋಹಿತ್ಯ ಕುಟುಂಬದಲ್ಲಿ ಶ್ರೀನಿವಾಸ ಬಾಸ್ರಿ ಮತ್ತು ಸರಸ್ವತಿ ಅಮ್ಮನವರ ಎರಡನೆ ಪುತ್ರನಾಗಿ ಜನಿಸಿದ ಇವರು ಆ ಕಾಲದಲ್ಲಿ ಕಲಾವಿದನಾಗಿ ಬೆಳೆದದ್ದು ಆಶ್ಚರ್ಯವೇ ಸರಿ. ಬಾಲ್ಯದಿಂದಲೇ ಹತ್ತಿರದಲ್ಲಿ ನಡೆಯುತಿದ್ದ ಮಂದಾರ್ತಿ ಮೇಳದ ಆಟಗಳನ್ನು ಕುತೂಹಲದಿಂದ ವೀಕ್ಷಿಸುತಿದ್ದ ಇವರಲ್ಲಿ ಯಕ್ಷಗಾನದ ಆಸಕ್ತಿ ಸಹಜವಾಗಿಯೇ ಮೂಡಿತು. ವಿದ್ಯಾವಂತರ ಕುಟುಂಬದಿಂದ ಬಂದ ಇವರಿಗೆ ಯಕ್ಷಗಾನ ಸೇರಲು ಮನೆಯಲ್ಲಿ ವಿರೋಧವಿದ್ದರು ಕಲಾಮಾತೆ ಅವರನ್ನು ಕೈಬೀಸಿ ಕರೆದಳು. ಏಳನೆ ತರಗತಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಹೇಳಿದ ಇವರು 1980ರಲ್ಲಿ ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರುಗಳಾದ ಹೆರಂಜಾಲು ವೆಂಕಟರಮಣ ಗಾಣಿಗ ಮತ್ತು ನೀಲಾವರ ರಾಮಕೃಷ್ಣಯ್ಯನವರ ಶಿಷ್ಯನಾಗಿ ಸೇರಿಕೊಂಡರು. ಬಾಲಕನ ಆಸಕ್ತಿ ಗಮನಿಸಿದ ಈ ಈರ್ವರು ಗುರುಗಳು ಯಕ್ಷಗಾನದ ಸರ್ವಾಂಗವನ್ನು ಶಿಷ್ಯನಿಗೆ ಧಾರೆಯೆರೆದ ಪರಿಣಾಮ ಯಕ್ಷಗಾನದ ಪರಿಪೂರ್ಣ ಕಲಾವಿದನಾಗಿ ಮೂಡಿಬರುವಲ್ಲಿ ಸಹಕಾರಿಯಾಯಿತು.

ಪ್ರಥಮವಾಗಿ ಮೂಲ್ಕಿ ಮೇಳದಲ್ಲಿ ಬಾಲಗೋಪಾಲನಾಗಿ ಗೆಜ್ಜೆಕಟ್ಟಿದ ಬಾಸ್ರಿಯವರು, ಪೀಠಿಕಾ ಸ್ತ್ರೀವೇಷಧಾರಿಯಾಗಿ ಅಮೃತೇಶ್ವರಿ ಮತ್ತು ಮೂಲ್ಕಿ ಮೇಳಗಳಲ್ಲಿ ತಿರುಗಾಟ ಮಾಡಿದರು. ಪ್ರಧಾನ ಸ್ತ್ರೀ ವೇಷಧಾರಿಯಾಗಿ ಕಮಲಶಿಲೆ ಮೇಳದಲ್ಲಿ ಕಾಣಿಸಿಕೊಂಡು ದೀರ್ಘಕಾಲ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದ್ದಾರೆ. ನಾಲ್ಕು ವರ್ಷದ ಹಿಂದೆ ಸೌಕೂರು ಮೇಳ ಸೇರಿದ ಇವರು ಇಂದಿನವರೆಗೂ ಆ ಮೇಳದ ಪ್ರಧಾನ ಕಲಾವಿದರು. ಅಲ್ಲಿ ಸಮಕಾಲೀನ ಪೌರಾಣಿಕ ಪ್ರಸಂಗಗಳ ನಡೆಯ ಬಗ್ಗೆ ಅನುಭವವಿರುವ ಎರಡನೇ ವೇಷಧಾರಿ ಕೋಡಿ ವಿಶ್ವನಾಥ ಗಾಣಿಗ ಹಾಗೂ ಪುರುಷ ವೇಷಧಾರಿ ಕೋಟ ಸುರೇಶ ಬಂಗೇರರ ಸಾಥಿಯಾಗಿ ಮುಖ್ಯ ಸ್ತ್ರೀ ವೇಷಗಳಿಗೆ ಜೀವ ತುಂಬಿದ್ದಾರೆ. ದ್ರೌಪದಿ ಪ್ರತಾಪದ ದ್ರೌಪದಿ, ಮೀನಾಕ್ಷಿ ಕಲ್ಯಾಣದ ಮೀನಾಕ್ಷಿ, ಪದ್ಮಗಂಧಿ, ಪ್ರಮೀಳೆ, ಮದನಾಕ್ಷಿ, ತಾರಾವಳಿ, ಆಸ್ತಿ ಪ್ರಾಸ್ತಿ, ಮುಂತಾದ ಕಸೆ ಪಾತ್ರಗಳು ಅಪಾರ ಜನಮನ್ನಣೆ ಗಳಿಸಿವೆ. ಕೋಡಿಯವರ ಭೀಮ, ಸುರೇಶನವರ ಅರ್ಜುನ, ಬಾಸ್ರಿಯವರ ದ್ರೌಪದಿ ಹಳೆಯ ತಲೆಮಾರಿನ ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಸೌಮ್ಯ ಪಾತ್ರಗಳನ್ನು ಸಹ ರಂಗದ ಚೌಕಟ್ಟು ಮೀರದೆ ಅಭಿನಯಿಸುವ ಇವರ ಚಂದ್ರಮತಿ, ದಾಕ್ಷಾಯಿಣಿ, ಮಂಡೋದರಿ, ಗಿರಿಜೆ, ದಮಯಂತಿ, ಸೀತೆ, ಸಾವಿತ್ರಿ ಮುಂತಾದ ಪಾತ್ರಗಳು ಸಹ ಅಪಾರ ಜನಮನ್ನಣೆ ಗಳಿಸಿವೆ. ಜೋಡಾಟದಲ್ಲೂ ಎರಡು ಮೂರು ವೇಷ ಮಾಡಿ ಎದುರು ಮೇಳಕ್ಕೆ ಸೂಕ್ತ ಪೈಪೋಟಿ ನೀಡಿದ್ದಾರೆ. ಬಯಲಾಟದ ಕಲಾವಿದರಿಗೆ ಡೇರೆ ಮೇಳದ ಕಲಾವಿದರನ್ನು ಹೋಲಿಸಿದಾಗ ಪ್ರಚಾರದ ಕೊರತೆ ಇದೆ ಎಂಬುದಕ್ಕೆ ಬಾಸ್ರಿಯವರೇ ಒಂದು ಸಾಕ್ಷಿಯಾಗಿ ನಿಲ್ಲುತ್ತಾರೆ. ತನ್ನ ಸುದೀರ್ಘ ಕಲಾಜೀವನದಲ್ಲಿ ಎಲ್ಲಿಯೂ ಪ್ರಚಾರ ಬಯಸದೆ ಎಲೆಯ ಮರೆಯ ಕಾಯಿಯಂತೆ ಕಲಾಕೈಂಕರ್ಯ ನಡೆಸಿದವರು. ಬಡಗುತಿಟ್ಟಿನ ಬಡ ಕಲಾವಿದರಿಗೆ ಸಹಾಯ ಹಸ್ತ ನೀಡುವ ಇವರ ಮನೆ, ಕಲಾಭಿಮಾನಿಯಾದ ಪತ್ನಿ ಹೇಮಾವತಿ, ಕಲಾಸಕ್ತನಾದ ಏಕಮಾತ್ರ ಪುತ್ರ ಕಾರ್ತಿಕ್ ಬಾಸ್ರಿ, ಇವರುಗಳೆ ಅವರ ಕಲಾಜೀವನಕ್ಕೆ ಸ್ಪೂರ್ತಿ. ತೀರ ಇತ್ತೀಚೆಗೆ ಮಟಪಾಡಿ ಯಕ್ಷಗಾನ ಮಂಡಳಿಯವರು ನೀಡುವ ವಾರ್ಷಿಕ ಕಲ್ಕೂರ ಪ್ರಶಸ್ತಿ ಇವರಿಗೆ ನೀಡಲಾಗಿದೆ. ಕಳೆದ ಸಾಲಿನ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸಹ ಅವರ ಕಿರೀಟಕ್ಕೊಂದು ಗರಿ ಮೂಡಿಸಿತ್ತು.



ಯಕ್ಷಗಾನದ ಸೇವೆಯಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ತಾವೇ ಹುಟ್ಟುಹಾಕಿದ ಸಂಸ್ಥೆ 'ಸಮೂಹ ಯಕ್ಷಗಾನ ಪ್ರತಿಷ್ಠಾನ (ರಿ) ಕುಂಜಾಲು ಇದರ ಮೂಲಕ ಯಕ್ಷಗಾನ ಸಂಬಂಧಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಶೈಶವದಲ್ಲಿರುವ ಈ ಸಂಸ್ಥೆ ಬೆಳೆದು ಹೆಮ್ಮರವಾಗಲೆಂಬುದು ಕಲಾಭಿಮಾನಿಗಳೆಲ್ಲರ ಹಾರೈಕೆ. ***ಲೇಖಕರು: ಪ್ರೊ.ಎಸ್.ವಿ.ಉದಯ ಕುಮಾರ ಶೆಟ್ಟಿ. ಮಣಿಪಾಲ***

# ಧೀರ ಕಲೆಯೊಳಗೆ ಕೀರವಾಣಿಯರು – 13



## ಯಕ್ಷಗಾನದ ಮಹಿಳಾ ಹಾಸ್ಯ ಪಾತ್ರಧಾರಿ – ಶ್ರೀಮತಿ ಅನಸೂಯ ಈಶ್ವರಚಂದ್ರ ರಾವ್

**ಬೆ**ಳೆದ ಪರಿಸರ, ಬೆಳೆವ ಪರಿಸರ ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಯಾವತ್ತಿಗೂ ಕಾರಣವಾಗುತ್ತವೆ ಎನ್ನುವುದು ಅಕ್ಷರಶಃ ಸತ್ಯ. ಸಾರ್ವಕಾಲಿಕ ಸತ್ಯವೂ ಕೂಡ. ಎಳವೆಯಲ್ಲಿಯೇ ಯಕ್ಷಗಾನ ಹಾಗೂ ಸಾಹಿತ್ಯದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದವರಾಗಿದ್ದು, ಕ್ರಮೇಣ ಅದನ್ನು ಬೆಳೆಸುತ್ತಾ ಬಂದು ಇವತ್ತಿಗೂ ಅದನ್ನು ಉಳಿಸಿಕೊಂಡು ಬಂದವರು ಶ್ರೀಮತಿ ಅನಸೂಯ ಈಶ್ವರಚಂದ್ರ ರಾವ್ ಇವರು.

ಯಕ್ಷಗಾನದ ಒಲವು ಸಣ್ಣಪ್ರಾಯದಲ್ಲಿ ಹುಟ್ಟಿದ್ದು, ಅದು ಬೆಳೆದು ಹೆಮ್ಮರವಾದದ್ದು 1995 ರಲ್ಲಿ. ಮಂಚಿಯಲ್ಲಿ ಶ್ರೀ ಕಲಶವೆಂಬ ಮಹಿಳಾ ಯಕ್ಷಗಾನ ಸಂಘದ ಸ್ಥಾಪನೆ ಮಾಡುತ್ತಾರೆ. ನಾಡಿನ ಅನೇಕ ಕಡೆಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ದೂರದರ್ಶನದಲ್ಲಿ"ನರಕಾಸುರ ಮೋಕ್ಷ" ಪ್ರಸಂಗ ಪ್ರಸಾರ ಕಂಡದ್ದು ಇವರಿಗೆ ಹೆಮ್ಮೆಯ ಸಂಗತಿ. ತಮ್ಮ ತಂಡ ಆರಂಭವಾಗುವಾಗ ಇವರು ಮೊದಲು ವೇಷಧಾರಿಯಾಗಿ ರಂಗ ಪ್ರವೇಶಿಸಿದ್ದು 'ನರಕಾಸುರ ಮೋಕ್ಷ'ದ ಸತ್ಯಭಾಮೆಯಾಗಿ. ಆದರೆ ಮತ್ತೆ ಮಾಡಿದ್ದೆಲ್ಲವೂ ಹಾಸ್ಯ ಪಾತ್ರಗಳೇ. ಮಹಿಳಾ ಕಲಾವಿದರಲ್ಲಿ ಹಾಸ್ಯ ಪಾತ್ರಕ್ಕೆ ಜೀವ ತುಂಬುವವರು ಬಹಳ ವಿರಳ. ಅಂತಹದರಲ್ಲಿ ಹೆಸರು ಕಂಡವರು ಇವರು. ಇವರ ತಂಡದ ಪ್ರದರ್ಶನವನ್ನು, ವಿಶೇಷವಾಗಿ ಇವರ ಹಾಸ್ಯ ಪಾತ್ರವನ್ನು ಸ್ವತಃ ಪುತ್ತೂರು ಶ್ರೀಧರ ಭಂಡಾರಿಯವರೇ ಮೆಚ್ಚಿಕೊಂಡಿದ್ದರಂತೆ. ತಮ್ಮ ತಂಡದಲಿ ಪಾತ್ರ ನಿರ್ವಹಿಸಿದ್ದಲ್ಲದೇ ಹೊರಗಿನ ತಂಡಗಳಿಗೂ ಆಹ್ವಾನಿತ ಹಾಸ್ಯ ಕಲಾವಿದೆಯಾಗಿ ಇವರು ಹೋಗುತ್ತಾರೆ. ಯಕ್ಷಗಾನ ಪಾತ್ರಧಾರಿಯಾಗಿ ಮಾತ್ರವಲ್ಲದೇ ತಾಳಮದ್ದಳೆ ಕೂಟಗಳಲ್ಲೂ ಭಾಗವಹಿಸಿದ ಅನುಭವ ಇವರಿಗಿದೆ. ಚಿಕ್ಕಂದಿನಿಂದಲೇ ಕತೆ ಬರೆಯುವ ಹವ್ಯಾಸವಿದ್ದ ಇವರು ಇದುವರೆಗೆ ಅನೇಕ ಕತೆಗಳನ್ನು ಬರೆದಿದ್ದಾರೆ. ಇವರು ಬರೆದ ಕತೆಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ "ಅಪ್ಪು" ಅನ್ನುವಂತಹ ಕಥಾಸಂಕಲನವೂ ಬಿಡುಗಡೆಗೊಂಡಿದೆ. ಮಂಗಳೂರು ಆಕಾಶವಾಣಿಯಲ್ಲಿಯೂ ಇವರ ಅನೇಕ ಕತೆಗಳು ಬಿತ್ತರಗೊಂಡಿವೆ. ಅನಸೂಯಾ ರಾವ್ ಇವರ ಸಂದರ್ಶನವೂ ಪ್ರಸಾರಗೊಂಡಿದೆ. ಅನಸೂಯಾ ರಾವ್ ಇವರ ಕಲಾಸೇವೆಯನ್ನು ಅನೇಕರು ಗುರುತಿಸಿದ್ದಾರೆ. ಯಕ್ಷಗಾನ ಮತ್ತು ಸಾಹಿತ್ಯ ಕ್ಷೇತ್ರದ ಸಾಧನೆಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಸಂಮಾನಿಸಿದೆ. ಬಂಟ್ವಾಳ ತಾಲೂಕಿನ ಸಾಹಿತ್ಯ ಸಮ್ಮೇಳನದಲ್ಲಿ ಇವರ ಕಲಾಸೇವೆಗೆ ಪುರಸ್ಕಾರ ದೊರೆತಿದೆ. ಮಾಯಾಲೋಕ ಕಲ್ಲಡ್ಕ ಇವರ ಬಹುಮುಖ ಸಾಧನೆಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.





"ಬ್ಯಾಂಕ್ ಉದ್ಯೋಗಿಯಾಗಿದ್ದ ಶ್ರೀ ಈಶ್ವರಚಂದ್ರ ರಾವ್ ಅವರ ಪತ್ನಿಯಾಗಿ, ಇಬ್ಬರು ಗಂಡು ಮಕ್ಕಳ ತಾಯಿಯಾಗಿ, ಒಲವಿನ ಸೊಸೆ, ಮುದ್ದಿನ ಮೊಮ್ಮಗನ ಪುಟ್ಟ ಕೃಷಿಯ, ಖುಷಿಯ ಸಂಸಾರ . ತನ್ನೆಲ್ಲಾ ಸಾಧನೆಗೆ ಪ್ರೋತ್ಸಾಹ ನೀಡುತ್ತಿದ್ದ ಪತಿ ತೀರಿಕೊಂಡ ಅಪಾರ ನೋವಿದ್ದರೂ, ತನ್ನ ಪ್ರತಿಯೊಂದು ಸಾಧನೆ, ಕರ್ತವ್ಯಗಳಲ್ಲಿ ಅವರಿದ್ದಾರೆಂಬ ನಂಬಿಕೆ. ಬದುಕಿರುವವರೆಗೂ ಸದಾ ಚಟುವಟಿಕೆಯಲ್ಲಿರಬೇಕೆಂಬುದೇ ಆಶಯ. ಇಂದಿನ ಸಮಾಜ ನೈಜ ಪ್ರತಿಭೆಯನ್ನು ಗೌರವಿಸಬೇಕೆಂಬುದೇ ಮನದಾಳದ ಮಾತು" – ಎನ್ನುತ್ತಾರೆ ಶ್ರೀ ಅನಸೂಯಾ ಈಶ್ವರಚಂದ್ರ ರಾವ್ ಇವರು. ಇವರ ಆಶಯ ಈಡೇರಲಿ ಎಂಬುದೇ ನಮ್ಮ ಹಾರೈಕೆ.

***ಲೇಖಕರು: ಸಾಯಿ ಸುಮಾ ಎಂ ನಾವುಡ***

---

# ಕಾಲಮಿತಿ ವ್ಯವಸ್ಥೆಯಲ್ಲಿ ಕಟೀಲು ಮೇಳದ ಪ್ರದರ್ಶನ

**ಯ**ಕ್ಷಗಾನದಲ್ಲಿ ಅಂದಿನಿಂದ ಇಂದಿನವರೆಗೂ ಅದೆಷ್ಟೇ ಬದಲಾವಣೆಗಳಾದರೂ ಹಿಂದಿನ ಆಕರ್ಷಣೆಯನ್ನೂ ಇಂದಿಗೂ ಉಳಿಸಿಕೊಂಡಿರುವಂತಹ ಪ್ರಸಂಗ ಎಂದರೆ ಅದು ಕಟೀಲು ಮೇಳದವರಿಂದ ಪ್ರದರ್ಶಿಸಲ್ಪಡುವ ಶ್ರೀ ದೇವಿ ಮಹಾತ್ಮೆ ಯಕ್ಷಗಾನ. ಪೂರ್ಣ ರಾತ್ರಿ ನಡೆಯುತ್ತಿದ್ದ ಯಕ್ಷಗಾನ ಕಾಲಮಿತಿಗೆ ಬಂದಿರುವ ಇಂದಿಗೂ ಈ ಪ್ರಸಂಗಕ್ಕೆ ಇಷ್ಟು ಬೇಡಿಕೆ ಇದೆ ಎಂದರೆ ಅದು ಸೋಜಿಗದ ಸಂಗತಿಯೂ ಹೌದು. ಅನೇಕ ದಾಖಲೆಗಳನ್ನು ಬರೆದಿರುವ ಈ ಪ್ರಸಂಗ ಕಟೀಲು ಮೇಳದಲ್ಲಿ ಪ್ರದರ್ಶನಗೊಳ್ಳುವ ರೀತಿ ವಿಶಿಷ್ಟ.. ಬೇರಿನ್ನ್ಯಾವ ಪ್ರಸಂಗಗಳಿಗೂ ಇಲ್ಲದ ಬೇಡಿಕೆ ಈ ಪ್ರಸಂಗಕ್ಕಿದೆ. ಅದಕ್ಕೆ ಕಾರಣ ಅದು ಆರಾಧನಾ ದೃಷ್ಟಿಯಿಂದ ಆಡಿಸುವ ಕಾರಣವೂ ಹೌದು. ಪತ್ತನಾಜೆಗೆ ವಾರ್ಷಿಕ ತಿರುಗಾಟವನ್ನು ಮೇಳಗಳು ಮುಗಿಸಿವೆ.





ಅಂತೆಯೇ ಮೇ 26 ರಂದು ಕಟೀಲು ಮೇಳದ ಸೇವೆಯಾಟವೂ ನಡೆದು ಈ ವರ್ಷಕ್ಕೆ ಯಾನ ಮುಕ್ತಾಯಗೊಳಿಸಿದೆ. ಆರು ತಿಂಗಳಲ್ಲಿ 1086 ಆಟಗಳಲ್ಲಿ 613 ಪ್ರದರ್ಶನಗಳು ಶ್ರೀ ದೇವಿ ಮಹಾತ್ಮೆ ನಡೆದಿವೆ. ಮೇಳದ ಆರಂಭದಲ್ಲಿ ಹಾಗೂ ಪತ್ತನಾಜೆಯಂದು ಮಾತ್ರ ರಾತ್ರಿ 7 ಗಂಟೆಗೆ ಶುರುವಾಗಿ ಮರುದಿನ

ಬೆಳಗ್ಗೆಯವರೆಗೆ ಸೇವೆ ನಡೆದಿದೆ. ವಿದ್ಯುನ್ಮತಿ ಕಲ್ಯಾಣ, ಮೀನಾಕ್ಷಿ ಕಲ್ಯಾಣ, ರತಿ ಕಲ್ಯಾಣ, ಶ್ರೀನಿವಾಸ ಕಲ್ಯಾಣ ಆಖ್ಯಾನಗಳು ಕೊನೆಯ ಸೇವೆಯಾಟದಂದು ನಡೆದಿವೆ. ಪ್ರದರ್ಶನಗೊಂಡಿವೆ. 200 ಕ್ಕೂ ಹೆಚ್ಚು ಕಲಾವಿದರು ಗೆಜ್ಜೆ ಕಟ್ಟಿ ಸೇವೆ ಸಲ್ಲಿಸಿದ್ದಾರೆ. ಈ ಬಾರಿ ನವಂಬರ್ 24 ರಂದು ತಿರುಗಾಟ ಆರಂಭವಾಗಿತ್ತು. 181 ದಿನಗಳಲ್ಲಿ 1086 ಆಟ ನಡೆದಿದ್ದು, ಒಂದನೇ ಮೇಳ 104, ಎರಡನೇ ಮೇಳ 109, ಮೂರನೇ ಮೇಳ 102, ನಾಲ್ಕನೇ ಮೇಳ 93, ಐದನೇ ಮೇಳ 90 ಹಾಗೂ, ಆರನೇ ಮೇಳ 115 ಪ್ರದರ್ಶನಗಳನ್ನು ನೀಡಿವೆ. ಇದರಲ್ಲಿ 613 ದೇವಿ ಮಹಾತ್ಮೆ ಪ್ರಸಂಗ ಪ್ರದರ್ಶನ ಕಂಡಿದೆ. ದಿನವೊಂದಕ್ಕೆ ಆರೂ ಮೇಳಗಳು ದೇವಿ ಮಹಾತ್ಮೆ ಆಡಿದ್ದು 8 ಬಾರಿ. ಇದು ಈ ಬಾರಿಯ ದಾಖಲೆ.. ಈ ಬಾರಿ ಕಟೀಲು ಮೇಳ ಶಿವಮೊಗ್ಗ, ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಗಡಿ ಭಾಗ ಹಾಗೂ ಬೆಂಗಳೂರಿನಲ್ಲೂ ಪ್ರದರ್ಶನ ನೀಡಿದೆ. ಕಟೀಲು ಕ್ಷೇತ್ರ ಮಹಾತ್ಮೆ 50, ಶ್ರೀ ದೇವಿ ಲಲಿತೋಪಾಖ್ಯಾನ 28 ಬಾರಿ, ಕೊಲ್ಲೂರು ಕ್ಷೇತ್ರ ಮಹಾತ್ಮೆ ದಶಾವತಾರ, ತ್ರಿಜನ್ಮ, ಜಾಂಬವತಿ, ಶ್ರೀನಿವಾಸ, ಘೋಷಯಾತ್ರ, ಮೂರೂವರೆ ವಜ್ರ, ಹಿರಣ್ಯ ಮಣಿ, ಶಿವಶಂಕರಿ, ಕಚದೇವಯಾವನಿ, ಸಾಂಬ ವಿವಾಹ, ಮನುಜವಂಶ ವಾಹಿನಿ, ದ್ರೌಪದಿ ಪ್ರತಾಪ, ಸತಿ ಹೈಮಾವತಿ, ಇನ್ನಿತರ ಪ್ರಸಂಗಗಳು ಬೆಂಗಳೂರು ನಗರದಲ್ಲಿ ಮೂರು ಪ್ರದರ್ಶನಗಳನ್ನು ನೀಡಿದೆ.

---


## ನಮ್ಮ ಲೈಬ್ರರಿ – ಯಕ್ಷಗಾನದೊಳಗಣ ಜೈನ ಸಾಹಿತ್ಯ




ಕನ್ನಡ ಸಾಹಿತ್ಯ ಲೋಕಕ್ಕೆ ಪಂಪ, ರನ್ನ, ಜನ್ನ, ರತ್ನಾಕರವರ್ಣಿಯಂತಹ ಜೈನ ಕವಿಗಳ ಕೊಡುಗೆ ಅಪಾರ. ಯಕ್ಷಗಾನ ಪ್ರಸಂಗ ಕೃತಿಗಳಲ್ಲಿ ಕೂಡ ಜೈನ ಪುರಾಣಗಳನ್ನು ಆಧರಿಸಿ ಹಲವು ಪ್ರಸಂಗಗಳು ರಚಿಸಲ್ಪಟ್ಟಿವೆ. ಅವುಗಳ ಬಗ್ಗೆ ಒಂದಷ್ಟು ಮಾಹಿತಿಗಳನ್ನು ಹಂಚಿಕೊಳ್ಳುವುದು ಈ ಲೇಖನದ ಉದ್ದೇಶ.

ಕವಿಭೂಷಣ ಬಿರುದಾಂಕಿತ ಕೆ ಪಿ ವೆಂಕಪ್ಪ ಶೆಟ್ಟಿ(ಕಾಲ 1885–1957)ಯವರು ಜನ್ನ ಕವಿಯ ಯಶೋಧರ ಚರಿತೆ ಕಾವ್ಯವನ್ನು ಆಧರಿಸಿ ಯಶೋಧರ ಚರಿತೆ ಯಕ್ಷಗಾನ ಪ್ರಸಂಗವನ್ನು ರಚಿಸಿದ್ದಾರೆ. ಅರ್ಥ ಸಹಿತ ಮೂರು ಅವತಾರದ ಕಥೆಗಳನ್ನು ಒಳಗೊಂಡ ಸುಮಾರು 200 ಪುಟಗಳಷ್ಟು ವಿಸ್ತಾರವಾದ ಕೃತಿಯನ್ನು ಧರ್ಮಸ್ಥಳದ ಅಂದಿನ ಧರ್ಮಾಧಿಕಾರಿ ಶ್ರೀ ರತನ್ನವರ್ಮ ಹೆಗಡೆ ಅವರ ಸಹಕಾರ ಮತ್ತು ಶ್ರೀ ನೇಮಿಸಾಗರ ವರ್ಣಿಜಿಯವರ ಮುನ್ನುಡಿಯೊಂದಿಗೆ 1955 ರಲ್ಲಿ ಕರ್ನಾಟಕ ಯಕ್ಷಗಾನ ಸಾಹಿತ್ಯ ಮಾಲೆ ಮೂಡಬಿದ್ರಿ ಇವರು ಪ್ರಕಟಿಸಿದ್ದಾರೆ. ಇದೇ ಕವಿ ರತ್ನಾಕರವರ್ಣಿಯ ಮಹಾಕಾವ್ಯ ಭರತೇಶ ವೈಭವ ವನ್ನು ಆಧರಿಸಿ ಭರತೇಶ ದಿಗ್ವಿಜಯ ಯಕ್ಷಗಾನ ಪ್ರಸಂಗ ಕೃತಿಯನ್ನು 1951 ರಲ್ಲಿ ರಚಿಸಿರುವುದಾಗಿ ತಿಳಿದುಬರುತ್ತದೆ. ಭರತೇಶ ವೈಭವ ಪ್ರಸಂಗವನ್ನು ಅಗರಿ ಶ್ರೀನಿವಾಸ ಭಾಗವತರು(ಕಾಲ 1906–1997) ಕೂಡ ರಚಿಸಿದ್ದು 1956ರಲ್ಲಿ ಕವಿಯಿಂದಲೇ ಪ್ರಕಟವಾಗಿದೆ. ಸೂರಿಕುಮೇರಿ ಕೆ ಗೋವಿಂದ ಭಟ್ಟರು ಭರತ–ಬಾಹುಬಲಿಯರ ಯುದ್ಧ ಮತ್ತು ವೃಷಭದೇವನ ಪ್ರಕರಣಗಳನ್ನು ಒಳಗೊಂಡ ಪಂಪ ಕವಿಯ ಆದಿಪುರಾಣ ಕಥೆಯನ್ನು ಆಧರಿಸಿ ತ್ಯಾಗವೀರ ಬಾಹುಬಲಿ ಎನ್ನುವ ಯಕ್ಷಗಾನ ಪ್ರಸಂಗ ಕೃತಿಯನ್ನು 1973 ರಲ್ಲಿ ರಚಿಸಿರುವುದಾಗಿ ತಿಳಿದುಬರುತ್ತದೆ. ಜನ್ನ ಕವಿಯ ಅನಂತನಾಥ ಪುರಾಣ ಕಾವ್ಯವನ್ನು ಆಧರಿಸಿ ಚಂಡಶಾಸನ ಅಥವಾ ಪುರೋಷೋತ್ತಮ ವಿಜಯ ಯಕ್ಷಗಾನ ಪ್ರಸಂಗ ಕೃತಿಯನ್ನು ಪುತ್ತೂರಿನ ಶ್ರೀ ಸೀತಾರಾಮ ಆರ್ ಪಾಡಿ ಯವರು ರಚಿಸಿದ್ದು ಪುತ್ತೂರಿನ ಸಮೀರ ಪ್ರಕಾಶನದಿಂದ 1982 ರಲ್ಲಿ ಪ್ರಕಟಿಸಲ್ಪಟ್ಟಿದೆ. ಸಾಣೂರು ಎಂ ಶ್ರೀಧರ ಪಾಂಡಿ (ಕಾಲ 1949–2011)ಯವರು ಹಲವು ಯಕ್ಷಗಾನ ಪ್ರಸಂಗ ಕೃತಿಗಳನ್ನು ಜೈನ ಸಾಹಿತ್ಯ ಆಧರಿಸಿ ರಚಿಸಿದ್ದು ಅವು ಎರಡು ಸಂಪುಟಗಳಲ್ಲಿ ಪ್ರಕಟವಾಗಿವೆ. ಅನೇಕಾಂತ ಪ್ರಕಾಶನ ಪ್ರಕಟಿಸಿದ ಮೊದಲ ಜಿನಯಕ್ಷಗಾನ ಸಂಪುಟದಲ್ಲಿ ಶ್ರೀ ಕೂಷ್ಮಾ0ಡಿನಿ ದೇವಿ ಮಹಾತ್ಮ ಎನ್ನುವ ಕೃತಿ ನಾಲ್ಕು ಭಾಗಗಳಿಂದ ಕೂಡಿದ್ದು ಶ್ರೀ ನೇಮಿನಾಥ ಚರಿತೆ, ಜಿನಭಕ್ತೆ ಅಗ್ನಿಲೆ, ಚಾವುಂಡರಾಯ ಚರಿತೆ, ಅಡಗೂರು ಚರಿತೆ ಅಥವಾ ಚಕ್ರವತಿ ಹೋಯ್ಸಳೇಶ್ವರ ಎನ್ನುವ ನಾಲ್ಕು ಯಕ್ಷಗಾನ ಪ್ರಸಂಗಗಳನ್ನು ಒಳಗೊಂಡಿದೆ. ಶ್ರೀಧರ ಪಾಂಡಿಯವರ ಎರಡನೆಯ ಜಿನಯಕ್ಷಗಾನ ಸಂಪುಟವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರವು ಹಿರಿಯ ಯಕ್ಷಗಾನ ವಿದ್ವಾನ್ಸ ಡಾ ಕೆ ಎಂ ರಾಘವ ನಂಬಿಯಾರರ ಸಂಪಾದಕತ್ವದಲ್ಲಿ 2013 ರಲ್ಲಿ ಪ್ರಕಟಿಸಿದ್ದು ಶ್ರೀ ಪಾರ್ಶ್ವನಾಥ ಚರಿತೆ ಮತ್ತು ಶ್ರೀ ಜ್ವಾಲಾಮಾಲಿನಿ ಮಹಾತ್ಮ ಪ್ರಸಂಗ ಮಾಲಿಕೆಗಳನ್ನು ಒಳಗೊಂಡಿದೆ. ಶ್ರೀ



ಪಾರ್ಶ್ವನಾಥ ಚರಿತೆ ಪ್ರಸಂಗವು ಕಮಠೋಪ ಸರ್ಗ, ಚಕ್ರೇಶ್ವರ ವಜ್ರನಾಭ, ಶ್ರೀ ತೀರ್ಥಂಕರೋದ್ಭವ, ಏನುವ ಮೂರು ಪ್ರಸಂಗಗಳನ್ನು ಶ್ರೀ ಜ್ವಾಲಾಮಾಲಿನಿ ಮಹಾತ್ಮ ಪ್ರಸಂಗ ಮಾಲಿಕೆ, ಶ್ರೀ ಜ್ವಾಲಾಮಾಲಿನಿ ದೇವಿ ಉದ್ಭವ, ಆಚಾರ್ಯ ಸಮಂತಭದ್ರ, ಅಶನೀಶ ವಿಜಯ ಎನ್ನುವ ಮೂರು ಪ್ರಸಂಗಗಳನ್ನು ಒಳಗೊಂಡಿದೆ. ಡಾ ಎ.ಎಸ್ ನಾರಾಯಣ ರಾವ್ ಚೊಕ್ಕಾಡಿ ಇವರು ನಾಗಕುಮಾರ ಚರಿತಂ ಎನ್ನುವ ಜೈನ ಸಾಹಿತ್ಯ ಆಧಾರಿತ ಯಕ್ಷಗಾನ ಪ್ರಸಂಗವನ್ನು 1960ರಲ್ಲಿ ರಚಿಸಿದ್ದು ಹಸ್ತಪ್ರತಿ ರೂಪದಲ್ಲಿ ಇದೆ. ಚಂದನೆ ಯಕ್ಷಗಾನ, ರುದ್ರ ಯಕ್ಷಗಾನ, ಅನಂತನಾಥ ಸ್ವಾಮಿ ಪಂಚಕಲ್ಯಾಣ ಮೊದಲಾದ ಯಕ್ಷಗಾನ ಕೃತಿಗಳು ಹಸ್ತಪ್ರತಿ ರೂಪದಲ್ಲಿದ್ದು ಪ್ರಕಟಣೆಗೊಂಡಿಲ್ಲ. ಅವುಗಳ ರಚನೆಕಾರರ ವಿವರಗಳು ಲಭ್ಯವಿಲ್ಲ. ಇತ್ತೀಚಿಗೆ ಯುವ ಯಕ್ಷಗಾನ ಕವಿಯತ್ರಿ ಶುಭಾಶಯ ಜೈನ್ ಅವರು ಜೈನ ಸಾಹಿತ್ಯ ಆಧರಿಸಿ ಯಕ್ಷಗಾನ ಪ್ರಸಂಗಗಳನ್ನು ರಚಿಸುತ್ತಿದ್ದು ನೀಲಾಂಜನೆ, ದಾನ ಚಿಂತಾಮಣಿ ಇತ್ಯಾದಿ ಕೃತಿಗಳನ್ನು ರಚಿಸಿ ಯಶಸ್ವಿಯಾಗಿ ಪ್ರದರ್ಶನಕ್ಕೆ ಒದಗಿಸುತ್ತಿದ್ದಾರೆ. ***ಲೇಖಕರು: ಉಮೇಶ ಶಿರೂರು, ಬೆಂಗಳೂರು 9448353910***

# ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಆಯೋಜಿತ ಯಕ್ಷಗಾನ ಕಾರ್ಯಕ್ರಮಗಳು




**ತು**ಳು ಭಾಷೆ ಹಾಗೂ ಲಿಪಿಯಲ್ಲಿ ರಚಿಸಲಾಗಿರುವ ***ಅಪ್ಪೆ ಅಂಜನೆ*** ಎಂಬ ಪೌರಾಣಿಕ ಯಕ್ಷಗಾನ ಕೃತಿ ಜೂನ್ ಒಂದನೇ ತಾರೀಕಿನಂದು ಗುರುವಾರ ಸಂಜೆ 4 ಗಂಟೆಗೆ ಮಂಗಳೂರಿನ ಹಂಪನಕಟ್ಟೆಯ ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ರವೀಂದ್ರ ಕಲಾಕ್ಷೇತ್ರದಲ್ಲಿ ಬಿಡುಗಡೆಯಾಗಲಿದೆ. ಮಂಗಳೂರು ವಿಶ್ವವಿದ್ಯಾನಿಲಯ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ, ವಿಶ್ವವಿದ್ಯಾಲಯ ಸಂಧ್ಯಾ ಕಾಲೇಜು ಮಂಗಳೂರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಶ್ರೀ ಸಂಸ್ಥಾನ ಒಡಿಯೂರು ತುಳು ಅಧ್ಯಯನ ಕೇಂದ್ರ, ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್(NYT) ವಂಡಾರು ಈ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದರೊಂದಿಗೆ ಮಂಗಳೂರು ವಿ.ವಿ. ಸಂಪಾದನೆಯ ಗೇನದ ಗೆಜ್ಜೆ ನೂದನೆ ಪಜ್ಜೆ, ತ್ರಿಂಶತಿ ತಿರುಳು ಎಂಬ ಕೃತಿಯೂ ಬಿಡುಗಡೆಯಾಗಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂ ಇದರ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಮಾಡಲಿದ್ದಾರೆ. ಕೃತಿಗಳ ಬಿಡುಗಡೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಕುಲಪತಿಗಳಾದ ಪ್ರೊ ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ ರವರು ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಂಗಳೂರು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಲಕ್ಷ್ಮಿ ದೇವಿ ಎಲ್, ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ನ ಸ್ಥಾಪಕಾಧ್ಯಕ್ಷರಾದ ವಂಡಾರು ಗೋವಿಂದ, ಸುರೇಂದ್ರ ಮಲ್ಲಿ, ಪ್ರವೀಣ್ ಕುಮಾರ್ ಕೊಡಿಯಾಲ್ ಬೈಲ್ ಮತ್ತಿತರರು ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಜೈ ಗುರುದೇವ ಕಲಾಕೇಂದ್ರ ಒಡಿಯೂರು ಇದರ ಮಕ್ಕಳಿಂದ ಜನಪದ ನೃತ್ಯ ನಡೆಯಲಿದೆ. ಬಳಿಕ ಅಪ್ಪೆ ಅಂಜನೆ ಯಕ್ಷಗಾನದ ಪ್ರಥಮ ಪ್ರದರ್ಶನ ಶ್ರೀ ಬೆಂಕಿನಾಥೇಶ್ವರ ಯಕ್ಷಗಾನ ಮಂಡಳಿ, ಬಾಳ ಕಳವಾರು ಇವರಿಂದ ನಡೆಯಲಿದೆ. ಭಾಗವತರಾಗಿ ಸತೀಶ್ ಮದ್ಯ, ವಿಜಿತ್ ಕುಮಾರ್ ಶೆಟ್ಟಿ, ಕಾಣಿಸಿಕೊಳ್ಳಲಿದ್ದು ಮುಖ್ಯ ಭೂಮಿಕೆಯಲ್ಲಿ, ಸುರೇದ್ರ ಮಲ್ಲಿ ಗುರುಪುರ, ಡಿ ಮನೋಹರ್ ಕುಮಾರ್ ಮತ್ತಿತರರು ಕಾಣಿಸಿಕೊಳ್ಳಲಿದ್ದಾರೆ. ಈ ಪ್ರಸಂಗವನ್ನು ಶುಭಾಶಯ ಜೈನ್ ರವರು ರಚಿಸಿದ್ದು, ಇದು ಅವರ 17ನೇ ಯಕ್ಷಗಾನ ಪ್ರಸಂಗ ಹಾಗೂ ತುಳು ಭಾಷೆ ಹಾಗೂ ಲಿಪಿಯಯಲ್ಲಿ ರಚಿಸಿದ ಮೊದಲ ಪೌರಾಣಿಕ ಪ್ರಸಂಗವಾಗಿದೆ. ಕಾರ್ಯಕ್ರಮದ ಬಗ್ಗೆ ವಿವರವನ್ನು ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕರಾದ ಡಾ. ಮಾಧವ ಎಂಕೆ ಹಾಗೂ ಶ್ರೀಮತಿ ಜಯಲಕ್ಷ್ಮಿ ಆರ್ ಶೆಟ್ಟಿ ನೀಡಿದರು..







ಉಡುಪಿ ಬ್ರಹ್ಮಾವರದ ಬಂಟರ ಭವನದಲ್ಲಿ ಜೂನ್ 10 2023 ರ ಶನಿವಾರದಂದು ಸಂಜೆ 7 ಗಂಟೆಗೆ ಸರಿಯಾಗಿ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ (NYT) ವಂಡಾರು ಸಂಸ್ಥೆಯ ಆಯೋಜನೆಯಲ್ಲಿ ***ದಾನ ಚಿಂತಾಮಣಿ*** ಎಂಬ ಕಾಲ್ಪನಿಕ ಯಕ್ಷಗಾನ ಪ್ರಸಂಗದ ಪ್ರದರ್ಶನ ನಡೆಯಲಿದೆ. ಪ್ರಸಂಗವನ್ನು ***ಶುಭಾಶಯ ಜೈನ್*** ರವರು ರಚಿಸಿದ್ದು ವಿಶೇಷ ರಂಗ ಸಂಯೋಜನೆಯೊಂದಿಗೆ ಯಕ್ಷಗಾನ ನಡೆಯಲಿದೆ, ಹಿಮ್ಮೇಳದಲ್ಲಿ ಹಿಲ್ಲೂರು ರಾಮಕೃಷ್ಣ ಹೆಗಡೆ, ಮೂಡುಬೆಳ್ಳೆ ಚಂದ್ರಕಾಂತ ರಾವ್, ಶಶಿ ಆಚಾರ್, ಕುಮಾರ್ ಅಮೀನ್, ಹಾಗೂ ಮುಖ್ಯ ಭೂಮಿಕೆಯಲ್ಲಿ ಎಂಕೆ ರಮೇಶ್ ಆಚಾರ್, ಯಲಗುಪ್ಪ ಸುಬ್ರಹ್ಮಣ್ಯ ಹೆಗಡೆ, ಪ್ರಸನ್ನ ಶೆಟ್ಟಿಗಾರ್, ವಂಡಾರ್ ಗೋವಿಂದ, ಹೆನ್ನಾಬೈಲ್ ವಿಶ್ವನಾಥ, ಸುಧೀರ್ ಉಪ್ಪೂರ್, ನರಸಿಂಹ ಗಾಂವ್ಕರ್, ವಿಜಯ್ ಮುದ್ದುಮನೆ, ಹರೀಶ್ ಜಪ್ತಿ, ನಾಗರಾಜ್ ದೇವಲ್ಕುಂದ, ಕಾರ್ತಿಕ್ ಪಾಂಡೇಶ್ವರ, ಸುಧಾಕರ್ ಕೂಡ್ಲಿ, ಅಕ್ಷಯ ಶಿರಿಯಾರ ಕಾಣಿಸಿಕೊಳ್ಳಲಿದ್ದಾರೆ. ಇನ್ನು ಯಕ್ಷಗಾನ ಪ್ರೇಕ್ಷಕರಿಗಾಗಿ ಬಹುಮಾನವನ್ನು ಆಯೋಜಿಸಿದ್ದು, ಉತ್ತಮ ವಿಮರ್ಶೆ ಬರೆದು ಕಳುಹಿಸಿದವರಿಗೆ ಐದು ಸಾವಿರ ರುಪಾಯಿಗಳ ನಗದು ಬಹುಮಾನ ಗೆಲ್ಲುವ ಅವಕಾಶವಿದೆ ಎಂದು ಸಂಯೋಜಕರು ತಿಳಿಸಿದ್ದಾರೆ..

---

**ಯಕ್ಷಗಾನ ಕಲಾರಂಗ (ರಿ.) ಉಡುಪಿ, ವೃತ್ತಿ ಕಲಾವಿದರ ಕ್ಷೇಮ ಚಿಂತನೆಗೆ ರೂಪಿಸಿದ ಅಂಗಸಂಸ್ಥೆ ಯಕ್ಷನಿಧಿಯ 25ನೇ ವರ್ಷದ ಸಮಾವೇಶ ಜೂನ್ 1, 2023 ಗುರುವಾರ ಉಡುಪಿ ಪೂರ್ಣಪ್ರಜ್ಞ ಸಭಾಂಗಣದಲ್ಲಿ ಜರಗಲಿದೆ. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಜಿ.ಎಲ್. ಹೆಗಡೆಯವರ ಆಧ್ಯಕ್ಷತೆ ವಹಿಸಲಿದ್ದಾರೆ. ಸಮಾರೋಪದಲ್ಲಿ ಡಾ. ಜಿ. ಶಂಕರ್ ಅಧ್ಯಕ್ಷತೆಯೊಂದಿಗೆ ಅತಿಥಿಗಳಾಗಿ ಉಡುಪಿ ಶಾಸಕರಾದ ಯಶಪಾಲ್ ಸುವರ್ಣ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಉದ್ಯಮಿ ಆನಂದ ಸಿ. ಕುಂದರ್, ಮಾಜಿ ಶಾಸಕ ಕೆ. ರಘುಪತಿ ಭಟ್, ಉದ್ಯಮಿ ಪಿ. ಪುರುಷೋತ್ತಮ ಶೆಟ್ಟಿ, ಕುಯಿಲಾಡಿ ಸುರೇಶ್ ನಾಯಕ್, ಜಯ ಕೋಟ್ಯಾನ್ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅಶಕ್ತ ಕಲಾವಿದರಿಗೆ ಗೃಹನಿರ್ಮಾಣ ನೆರವು, ವೈದ್ಯಕೀಯ ನೆರವು, ಕಲಾವಿದರ ಆರೋಗ್ಯ ತಪಾಸಣೆ ನಡೆಯಲಿದೆ. ಮದ್ಯಾಹ್ನ ಕಲಾವಿದರಿಂದ 'ಸಮಯಮಿತಿ ಯಕ್ಷಗಾನ ಸುಖ–ಕಷ್ಟ' ಎಂಬ ವಿಷಯದ ಕುರಿತು ಕಲಾವಿದರು ಅನುಭವ ಹಂಚಿಕೊಳ್ಳಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**